**ಅತೀ ಮಹತ್ವಪೂರ್ಣ ನಿಯಮಗಳು ಹಾಗೂ ಷರತ್ತುಗಳು (ಎಂಆಯ್ ಟಿಸಿ)**

# ಅತೀ ಮಹತ್ವಪೂರ್ಣ ನಿಯಮಗಳು ಹಾಗೂ ಷರತ್ತುಗಳು (ಎಂಆಯ್ಈಟಿಸಿ)-ಕ್ರೆಡಿಟ್ ಕಾರ್ಡ್

## ಎ. ಶುಲ್ಕಗಳು:

### ಪ್ರವೇಶ ಶುಲ್ಕಗಳು ಮತ್ತು ವಾರ್ಷಿಕ ಶುಲ್ಕಗಳು:

- ಕಾರ್ಡ್ ಸಕ್ರಿಯಗೊಂಡ ನಂತರ ಕಾರ್ಡುದಾರರಿಂದ ವಿಧಿಸಲಾಗುವ ಪ್ರವೇಶ ಶುಲ್ಕವನ್ನು ಒಂದು ಬಾರಿ ಮಾತ್ರ ವಿಧಿಸಲಾಗುವುದು ಇದು ಕಾರ್ಡಿನ ಪ್ರಕಾರದ ಅನುಗುಣವಾಗಿರುವುದು.
- ವಾರ್ಷಿಕ ಶುಲ್ಕ, ಕಾರ್ಡಿನ ಎರಡನೇಯ ವರ್ಷದ ಪ್ರಾರಂಭದಲ್ಲಿ ಮೊದಲೇ ವಿಧಿಸಲಾಗುವ ಶುಲ್ಕವಾಗಿರುತ್ತದೆ.
- ಪ್ರವೇಶ ಶುಲ್ಕ ಮತ್ತು ವಾರ್ಷಿಕ ಶುಲ್ಕಗಳು ಈ ಕೆಳಗಿನ ಪ್ರಕಾರ ಪ್ರಾಥಮಿಕ ಕಾರ್ಡದಾರರ ಕ್ರೆಡಿಟ್ ಕಾರ್ಡ್ ಖಾತೆಗೆ ವಿಧಿಸಲಾಗುವುದು. ಶುಲ್ಕ ವಿಧಿಸಿದ ತಿಂಗಳಿನ ಕ್ರೆಡಿಟ್ ಕಾರ್ಡ್ ಸ್ಟೇಟಮೆಂಟ್ ನಲ್ಲಿ ತಿಳಿಸಲಾಗುವುದು.
- ವಿಧಿಸಲಾದ ಶುಲ್ಕವನ್ನು ತಿರುಗಿಸಿ ನೀಡಲಾಗದು.

| ಕಾರ್ಡ್ ನ ಪ್ರಕಾರ | ಪ್ರವೇಶ ಶುಲ್ಕ | | ವಾರ್ಷಿಕ ಶುಲ್ಕ | |
|---|---|---|---|---|
| **ವೀಸಾ ಗೋಲ್ಡ್** | ಶೂನ್ಯ | ಶೂನ್ಯ | ರೂ.299/- | ರೂ.199/- |
| **ವೀಸಾ ಪ್ಲಾಟಿನಂ** | ಶೂನ್ಯ | ಶೂನ್ಯ | ರೂ.399/- | ರೂ.299/- |
| **ವೀಸಾ ಸಿಗ್ನೆಚರ್** | ಶೂನ್ಯ | ಶೂನ್ಯ | ರೂ.1999/- | ರೂ.999/- |
| **ರುಪೈ ಪ್ಲಾಟಿನಂ** | ಶೂನ್ಯ | ಶೂನ್ಯ | ರೂ.299/- | ರೂ.199/- |
| **ರುಪೈ ಸೆಲೆಕ್ಟ್** | ಶೂನ್ಯ | ಶೂನ್ಯ | ರೂ.499/- | ರೂ.399/- |
| **ಯೂನಿಯನ್ ಯೂನಿ-ಕಾರ್ಬನ್** | ರೂ.499/- | ಶೂನ್ಯ | ರೂ.499/- | ರೂ.199/- |
| **ಜೆ ಸಿ ಬಿ ವೆಲ್ ನೆಸ್** | ರೂ.999/- | **ಅನ್ವಯಿಸುವುದಿಲ್ಲ** | ರೂ.499/- | **ಅನ್ವಯಿಸುವುದಿಲ್ಲ** |
| **ಜೆ ಸಿ ಬಿ ಹೆಲ್ತ್** | ರೂ.499/- | **ಅನ್ವಯಿಸುವುದಿಲ್ಲ** | ರೂ.499/- | **ಅನ್ವಯಿಸುವುದಿಲ್ಲ** |
| **ಯೂನಿಯನ್ ಎಂ ಎಸ್ ಎಂ ಈ** | ಶೂನ್ಯ | **ಅನ್ವಯಿಸುವುದಿಲ್ಲ** | ಶೂನ್ಯ | **ಅನ್ವಯಿಸುವುದಿಲ್ಲ** |
| **ವೀಸಾ ಬಿಜನೆಸ್ ಪ್ಲಾಟಿನಂ ಕಾರ್ಪೊರೇಟ್ ಕಾರ್ಡುಗಳು** | ರೂ.1,500/- | **ಅನ್ವಯಿಸುವುದಿಲ್ಲ** | ರೂ.2,000/- | **ಅನ್ವಯಿಸುವುದಿಲ್ಲ** |

ಕಳೆದ ವರ್ಷ ಉಲ್ಲೇಖಿಸಲಾದ ಕೋಷ್ಟಕದ ಅನುಸಾರ ಉಪಯೋಗಿಸಿದಲ್ಲಿ,ವಾರ್ಷಿಕ ಶುಲ್ಕವನ್ನು ಮನ್ನಾ ಮಾಡಲಾಗುವುದು.

| | |
|---|---|
| **ವೀಸಾ ಗೋಲ್ಡ್/ರುಪೈ ಪ್ಲಾಟಿನಂ** | **ರೂ.30,000/-** |
| **ವೀಸಾ ಪ್ಲಾಟಿನಂ/ರುಪೈ ಸೆಲೆಕ್ಟ್/ಜೆ ಸಿ ಬಿ ಹೆಲ್ತ್** | **ರೂ.50,000/-** |
| **ಯೂನಿಯನ್ ಯೂನಿ-ಕಾರ್ಬನ್/ಜೆ ಸಿ ಬಿ ವೆಲ್ ನೆಸ್** | **ರೂ.1,00,000/-** |

| | | |
|---|---|---|
| | **ವೀಸಾ ಸಿಗ್ನೆಚರ್** | **ರೂ.2,70,000/-** |

**ನಗದು ಮುಂಗಡ ಹಿಂತೆಗೆಯುವಿಕೆಯ ಶುಲ್ಕ:**

- ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಕ್ರೆಡಿಟ್ ಕಾರ್ಡ್ ಗ್ರಾಹಕರಿಗೆ ಹಣ ಹಿಂಪಡೆಯುವಿಕೆಯ ಕ್ರ.ಸಂ. ಬಿ ಯಲ್ಲಿ ಉಲ್ಲೇಖಿಸಲಾದ ನಿರ್ಧರಿಸಿದ ಮಿತಿಯ ವರೆಗೆ ಯಾವುದೇ ಬ್ಯಾಂಕಿನ ಎ ಟಿ ಎಂನಲ್ಲಿ ನಗದು ಹಣ ಹಿಂಪಡೆಯುವ ಸೌಲಭ್ಯವನ್ನು ನೀಡಲಾಗಿದೆ.
- ಎಲ್ಲ ಮುಂಗಡ ಹಣ ಹಿಂಪಡೆಯುವಿಕೆಗಳ ಮೇಲೆ ಹಣ ಹಿಂಪಡೆದ ದಿನಾಂಕಿನಿಂದ 2.5% ಪ್ರತಿ ತಿಂಗಳು ದರದಿಂದ ಬಡ್ಡಿಯನ್ನು ವಿಧಿಸಲಾಗುವುದು.
- ಈ ಸೌಲಭ್ಯವನ್ನು ಪಡೆದ ಕಾರ್ಡುದಾರರಿಂದ ಈ ಕೆಳಗೆ ಉಲ್ಲೇಖಿಸಿದಂತೆ ಮುಂಗಡ ನಗದು ಶುಲ್ಕವನ್ನು ವಿಧಿಸಲಾಗುವುದು.

| | |
|---|---|
| ನಮ್ಮ ಬ್ಯಾಂಕ್ ಎ ಟಿ ಎಂ ನಿಂದ ನಗದು ಹಿಂಪಡೆಯುವಿಕೆ | ಕನಿಷ್ಠ ರೂ.200/- ಅಥವಾ ಮುಂಗಡ ನಗದು ಹಿಂಪಡೆಯುವಿಕೆ ಶೇಕಡಾ 3%, ಯಾವುದು ಅಧಿಕವಿರುವುದೋ ಅದು. |
| ಬೇರೆ ಬ್ಯಾಂಕ್ ಎ ಟಿ ಎಂ ನಿಂದ ನಗದು ಹಿಂಪಡೆಯುವಿಕೆ | ಕನಿಷ್ಠ ರೂ.200/- ಅಥವಾ ಮುಂಗಡ ನಗದು ಹಿಂಪಡೆಯುವಿಕೆ ಶೇಕಡಾ 3%, ಯಾವುದು ಅಧಿಕವಿರುವುದೋ ಅದು. |

**ಸೇವಾ ತೆರಿಗೆ:**

| | | |
|---|---|---|
| ಕಾರ್ಡ್ ಬದಲಾವಣೆಯ ಶುಲ್ಕಗಳು | ವೀಸಾ ಗೋಲ್ಡ್/ರುಪೈ ಪ್ಲಾಟಿನಂ/ಯೂನಿಯನ್ ಯೂನಿ ಕಾರ್ಬನ್/ಜೆ ಸಿಬಿ ವೆಲ್ ನೆಸ್/ಜೆ ಸಿ ಬಿ ಹೆಲ್ತ್ | ರೂ.149/- |
| | ವೀಸಾ ಪ್ಲಾಟಿನಂ/ರುಪೈ ಸೆಲೆಕ್ಟ್/ ಯೂನಿಯನ್ ಎಂ ಎಸ್ ಎಂ ಈ | ರೂ.249/- |
| | ವೀಸಾ ಸಿಗ್ನೆಚರ್ | ರೂ.299/- |
| ಕಳೆದು ಹೋದ ಕಾರ್ಡ್ ಗಳ ಶುಲ್ಕಗಳು | ಶೂನ್ಯ | |
| ಚಾರ್ಜ್ ಸ್ಲಿಪ್ ಗೆ ವಿನಂತಿಯ ಶುಲ್ಕಗಳು | ರೂ.200/- ಪ್ರತಿ ಬಾರಿ | |
| ತಾತ್ಕಾಲಿಕ ವರ್ಧನೆ (ಯೂನಿಯನ್ ಎಂ ಎಸ್ ಎಂ ಈ ) ಗೆ | ರೂ.200/- ಪ್ರತಿ ಬಾರಿ | |

| | |
|---|---|
| ಅನ್ವಯಿಸುವುದಿಲ್ಲ. | |
| ಹಾಟ್ ಲಿಸ್ಟಿಂಗ್ ಶುಲ್ಕ | ಶೂನ್ಯ |
| ಎಂ ಎ ಡಿ ಪಾವತಿಸದಲ್ಲಿ ಹಾಟ್ ಲಿಸ್ಟಿಂಗ್ ಶುಲ್ಕಗಳು | ರೂ.200/- |
| ಬಾಕಿ ಮೊತ್ತ ವಿಚಾರಣೆಯ ಶುಲ್ಕಗಳು | ಯೂನಿಯನ್ ಬ್ಯಾಂಕ್ ಎ ಟಿ ಎಂ-ಶೂನ್ಯ<br>ಬೇರೆ ಬ್ಯಾಂಕ್ ಎ ಟಿ ಎಂ -ರೂ.20/- |
| ಗ್ರೀನ್ ಪಿನ್ ಶುಲ್ಕಗಳು | ಶೂನ್ಯ |
| ಚೆಕ್ ವಾಪಸಾತಿ ಶುಲ್ಕಗಳು | ರೂ.250/- |
| ಮಿತಿ ಮೀರಿದ ಶುಲ್ಕಗಳು | ಮಿತಿ ಮೀರಿದ ಮೊತ್ತದ 2.5%, ಕನಿಷ್ಠ ರೂ.250/- |
| ವಿದೇಶಿ ಹಣ ಮಾರ್ಕ್ ಅಪ್ ಶುಲ್ಕ | 3% |
| ಇಂಧನ ಹೆಚ್ಚುವರಿ ತೆರಿಗೆ ಮನ್ನಾ | ಅ. ಪ್ರತಿ ತಿಂಗಳು 1% ಅಥವಾ ರೂ.100/- ರ ವರೆಗೆ (ಯೂನಿಯನ್ ಯೂನಿ-ಕಾರ್ಬನ್ ಕಾರ್ಡ್‌ಗೆ ಅನ್ವಯಿಸುವುದಿಲ್ಲ)<br>ಆ. ಯೂನಿಯನ್ ಯೂನಿ -ಕಾರ್ಬನ್ ಕಾರ್ಡ್ ಗೆ- ಎಚ್.ಪಿ.ಸಿ.ಎಲ್ ಔಟ್ ಲೆಟ್ ನಲ್ಲಿ ರೂ.200/- ಮತ್ತು ಅದಕ್ಕಿಂತ ಹೆಚ್ಚಿನ ವ್ಯವಹಾರದ ಮೌಲ್ಯದ ಮೇಲೆ ಪ್ರತಿ ಬಿಲ್ಲಿಂಗ್ ನಲ್ಲಿ 1% ಅಥವಾ ರೂ.100/- ರವರೆಗೆ ರಿಯಾಯಿತಿ ನೀಡಲಾಗುವುದು. |
| ರೈಲು ಪ್ರಯಾಣದಲ್ಲಿ ವ್ಯವಹಾರದ ಶುಲ್ಕ | 1.5%+ಆಯ್.ಆರ್.ಸಿ.ಟಿ.ಸಿ ಶುಲ್ಕ |
| ತಡ ಪಾವತಿಯ ಮೇಲಿನ ಶುಲ್ಕಗಳು | ಅ.ರೂ.25000/- ರವರೆಗಿನ ಬಾಕಿ ಮೊತ್ತಕ್ಕೆ ರೂ.200/-<br>ಆ.ರೂ25000/- ಕ್ಕಿಂತ ಹೆಚ್ಚಿನ ಬಾಕಿ ಮೊತ್ತಕ್ಕೆ ರೂ.500/- |
| 3 ತಿಂಗಳಿಗಿಂತ ಹೆಚ್ಚಿನ ವಿವರಣೆಗಳು | ರೂ.50/- ಪ್ರತಿ ವಿವರಣೆ |

ಕಂತುಗಳ (ಈ ಎಮ್ ಆಯ್) ಸೌಲಭ್ಯ:

ಆಭರಣಗಳ ಕೊಂಡುಕೊಳ್ಳುವಿಕೆ, ಎ.ಟಿ.ಎಂ ಗಳ ಮೂಲಕ ನಗದು ಹಿಂಪಡೆಯುವಿಕೆ ಮತ್ತು ಪಿ ಓ ಎಸ್ ಗಳ ಮೂಲಕ ನಗದು, ಪೆಟ್ರೋಲ್ ಪಂಪ್ ನಲ್ಲಿ ಇಂಧನದ ಕೊಳ್ಳುವುದು ಮತ್ತು ಬಾರ್ ನಲ್ಲಿಯ ವ್ಯವಹಾರಗಳನ್ನು ಹೊರತು ಪಡಿಸಿ ಕಾರ್ಡುದಾರ ರೂ.5,000/- ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಎಲ್ಲ ವ್ಯಾಪಾರಿಕ ವ್ಯವಹಾರಗಳ ಮೇಲೆ ಈ ಎಮ್ ಆಯ್ ಸೌಲಭ್ಯವನ್ನು ಪಡೆಯಬಹುದಾಗಿದೆ. ಈ ಸೌಲಭ್ಯವನ್ನು 3/6/9/12 ತಿಂಗಳಿನ ವರೆಗೆ ಪಡೆಯಬಹುದಾಗಿದೆ. ಈ ಸೌಲಭ್ಯದ ಮೇಲಿನ ಶುಲ್ಕಗಳನ್ನು ಈ ಕೆಳಗಿನಂತೆ ವಿಧಿಸಲಾಗುವುದು.

| | |
|---|---|
| ಬಡ್ಡಿ ದರ | ಬಾಕಿ ಮೊತ್ತದ ಕಡಿಮೆ ಮಾಡುವಾಗ ವಾರ್ಷಿಕ 16% |
| ಸಂಸ್ಕರಣಾ ಶುಲ್ಕಗಳು | 2% ಅಥವಾ ಕನಿಷ್ಠ ರೂ.200/- ಮತ್ತು ಗರಿಷ್ಠ ರೂ.1000/- |
| ಅವಧಿ ಪೂರ್ವ ತೀರುವಳಿಯ ಶುಲ್ಕಗಳು | ಬಾಕಿ ಮೊತ್ತದ 2% |

ಈ ಮೇಲೆ ಉಲ್ಲೇಖಿಸಲಾದ ಶುಲ್ಕಗಳು ಜಿ ಎಸ್ ಟಿ ಹೊರತಾಗಿವೆ.

## ಅತೀ ಮಹತ್ವಪೂರ್ಣ ನಿಯಮಗಳು ಹಾಗೂ ಷರತ್ತುಗಳು (ಎಂಐಟಿಸಿ)

ಈ ಮೇಲಿನ ಶುಲ್ಕಗಳು ಬದಲಾವಣೆಗೆ ಒಳಪಟ್ಟಿವೆ. ಇತ್ತೀಚಿನ ಶುಲ್ಕಗಳಿಗಾಗಿ, ದಯವಿಟ್ಟು https://unioncards.unionbankofindia.co.in/ ವೆಬ್ ಸೈಟ್ ನ್ನು ಸಂಪರ್ಕಿಸಿ.

ಬಡ್ಡಿರಹಿತ ಅವಧಿ:

ಬಡ್ಡಿ ರಹಿತ ಸಾಲದ ಅವಧಿ 20 ರಿಂದ 50 ದಿನಗಳ ವರೆಗೆ ಇರುತ್ತದೆ. ಆದರೆ, ಇದು ರಿಟೇಲ್ ವ್ಯವಹಾರಗಳಿಗೆ ಮಾತ್ರ ಅನ್ವಯಿಸುತ್ತದೆ. ಮತ್ತು ಈ ಹಿಂದಿನ ತಿಂಗಳಿನ ಬಾಕಿ ಎಲ್ಲ ಮೊತ್ತವನ್ನು ತೀರಿಸಿದ್ದಲ್ಲಿ, ಅನ್ವಯಿಸುತ್ತದೆ. ಎ.ಟಿ.ಎಂ ನಿಂದ ನಗದು ಮೊತ್ತ ಹಿಂಪಡೆಯುವಿಕೆ (ಮುಂಗಡ ನಗದು) ಕ್ಕೆ ಯಾವುದೇ ಬಡ್ಡಿಮುಕ್ತ ಅವಧಿ ಇರುವುದಿಲ್ಲ.

ವಿತ್ತ ಶುಲ್ಕಗಳು:

| | |
|---|---|
| ಪಾವತಿಯ (ಎಮ್ ಎ ಡಿ)ದಿನಾಂಕದಂದು ಕನಿಷ್ಠ ಮೊತ್ತವನ್ನು ಪಾವತಿಸಿದರೆ | 2.50% ಪ್ರತಿ ತಿಂಗಳು/30% ವಾರ್ಷಿಕ ಆಧಾರದ ಮೇಲೆ |
| ಪಾವತಿಯ (ಎಮ್ ಎ ಡಿ)ದಿನಾಂಕದಂದು ಕನಿಷ್ಠ ಮೊತ್ತವನ್ನು ಪಾವತಿಸದಿದ್ದರೆ | 2.95% ಪ್ರತಿ ತಿಂಗಳು/35.4% ವಾರ್ಷಿಕ ಆಧಾರದ ಮೇಲೆ |

**ಹಣಕಾಸು ಶುಲ್ಕಗಳ ಲೆಕ್ಕಾಚಾರಗಳು (ವಿವರಣಾತ್ಮಕ ಉದಾಹರಣೆಗಳು) :**

ಕ್ರೆಡಿಟ್ ಕಾರ್ಡುದಾರ ಪಾವತಿಸಬೇಕಾದ ದಿನಾಂಕಿನ ವರೆಗೆ ಬಾಕಿ ಒಟ್ಟು ಮೊತ್ತವನ್ನು ಪಾವತಿಸುವ ಆಯ್ಕೆಯನ್ನು ಮಾಡದಿದ್ದರೆ, ಕಾರ್ಡುದಾರನ ಹತ್ತಿರ ಯಾವುದೇ ಹೆಚ್ಚುವರಿ (ಗ್ರೇಸ್) ಅವಧಿ ಇರುವುದಿಲ್ಲ ಮತ್ತು ಮಾಸಿಕ ಬಡ್ಡಿದರದ ಆಧಾರದ ಮೇಲೆ ಹಣಕಾಸು ಶುಲ್ಕ ವಿಧಿಸಲಾಗುವುದು.

ನಗದು ಮೊತ್ತ ಹಿಂಪಡೆಯುವಿಕೆ (ಮುಂಗಡ ನಗದು)ಗಾಗಿ, ಯಾವುದೇ ಹೆಚ್ಚುವರಿ (ಗ್ರೇಸ್) ಅವಧಿ ಇರುವುದಿಲ್ಲ ಮತ್ತು ಹಣ ಹಿಂಪಡೆಯುವಿಕೆಯ ದಿನಾಂಕದಿಂದ ಬಡ್ಡಿ ವಿಧಿಸಲಾಗುವುದು.

ಉದಾಹರಣೆ:

ಪ್ರತಿ ತಿಂಗಳು 25ನೇ ದಿನಾಂಕ ಬಿಲ್ಲಿಂಗ್ ದಿನಾಂಕವೆಂದು ಭಾವಿಸುವುದಾದರೆ,

ವ್ಯವಹಾರದ ಅವಧಿ: 25 ಅಗಸ್ಟ್, 22 ರಿಂದ 24 ಸೆಪ್ಟೆಂಬರ್, 22

ಬಿಲ್ಲಿಂಗ್ ದಿನಾಂಕ: 25 ಸೆಪ್ಟೆಂಬರ್, 22 ಮತ್ತು ಪಾವತಿಸುವ ದಿನಾಂಕ: 15 ಅಕ್ಟೋಬರ್, 22 (ಬಿಲ್ಲಿಂಗ ದಿನಾಂಕದಿಂದ 20 ದಿನಗಳ ನಂತರ)

| ವ್ಯವಹಾರದ ದಿನಾಂಕ | ವ್ಯವಹಾರದ ವಿವರಣೆ | ಮೊತ್ತ |
|---|---|---|
| 30.08.2022 | ಕಿರಾಣಿ | 5000/- |
| 10.09.2022 | ಈ-ಕಾಮ್ | 10000/- |

25 ಅಗಸ್ಟ್, 22 ರಿಂದ ಯಾವುದೇ ಹಿಂದಿನ ಬಾಕಿ ಮೊತ್ತ ಇಲ್ಲವೆಂದು ಭಾವಿಸುವುದಾದರೆ, 25 ಸೆಪ್ಟೆಂಬರ್, 22 ಕ್ಕೆ ಜನರೇಟ್ ಮಾಡಲಾದ ವಿವರಣೆ ರೂ.15000/- ಬಾಕಿ ಮೊತ್ತ ನಮೂದಿಸಲಾಗಿದೆ. ಎ ಎಂ ಡಿ @ 5% ರಂತೆ ಶುಲ್ಕ ವಿಧಿಸಿರುವುದರಿಂದ ರೂ.750/- ಆಗುವುದು, ಇದನ್ನು ಪಾವತಿಸುವ ದಿನಾಂಕ 15 ಅಕ್ಟೋಬರ್, 2022 ಇರುತ್ತದೆ.

1. ರೂ. 15000/- ನ ಪೂರ್ಣ ಬಾಕಿ ಮೊತ್ತದ ಪಾವತಿಯನ್ನು ಪಾವತಿಸಬೇಕಾದ ದಿನಾಂಕ ಅಂದರೆ 15 ಅಕ್ಟೋಬರ್, 22 ಕ್ಕೆ ಅಥವಾ ಅದಕ್ಕಿಂದ ಮೊದಲೇ ಪಾವತಿಸಿದ್ದರೆ, ಯಾವುದೇ ಶುಲ್ಕ ವಿಧಿಸಲಾಗುವುದಿಲ್ಲ.
2. ಎಮ್ ಎ ಡಿ ಪಾವತಿಯನ್ನು ಪಾವತಿಸಬೇಕಾದ ದಿನಾಂಕದಂದು ಅಥವಾ ಅದಕ್ಕಿಂತ ಮೊದಲೇ ಪಾವತಿಸಿದ್ದರೆ:

ಎಂ ಎ ಡಿ ರೂ.750/- ಯ ಪಾವತಿ 15 ಅಕ್ಟೋಬರ್, 2022 ಕ್ಕೆ ಮಾಡಲಾಗಿದೆ, ಬ್ಯಾಂಕಿನ ಬಾಕಿ ಮೊತ್ತದ ಮೇಲೆ 2.50% ಪ್ರತಿ ತಿಂಗಳಿನ ದರದಿಂದ ಹಣಕಾಸಿನ ಶುಲ್ಕ ವಿಧಿಸಲಾಗುವುದು., ಅಂದರೆ ರೂ.14,250/- ರ ಮೇಲೆ ಒಂದು ತಿಂಗಳಿಗೆ 2.50%.

25 ಅಕ್ಟೋಬರ್, 22 ಕ್ಕೆ ಜನರೇಟ್ ಮಾಡಲಾದ ವಿವರಣೆಯಲ್ಲಿ ಒಟ್ಟು ಬಾಕಿ ಮೊತ್ತ ರೂ.15,758.15(ಅಂದರೆ ರೂ.15,000+ರೂ.442.50 ಬಡ್ಡಿ ಮೊತ್ತ+ರೂ.79.65 ಜಿ.ಎಸ್. ಟಿ.+ರೂ.200 ವಿಳಂಬ ಶುಲ್ಕ+ರೂ.36 ಜಿ.ಎಸ್.ಟಿ.) ಮತ್ತು ಎಂ ಎ ಡಿ @ 5% ರೂ.15,758.15 ಮೇಲೆ ಅಂದರೆ ರೂ.790/-( ಮುಂದಿನ 10 ರವರೆಗೆ ಪೂರ್ಣ ಅಂಕಿ ಮಾಡಲಾಗುವುದು.)

**ಬಿ. ಹಣ ಹಿಂತೆಗೆದುಕೊಳ್ಳುವ ಮಿತಿ:**

i. ಬ್ಯಾಂಕ್ ತನ್ನ ವಿವೇಕಾಧಿಕಾರದ ಅನುಸಾರ ಸಾಲದ ಮಿತಿ ಮತ್ತು ನಗದು ಮುಂಗಡ ಮಿತಿಯನ್ನು ನಿರ್ಧರಿಸುವುದು ಮತ್ತು ಇದರ ಮಾಹಿತಿಯನ್ನು ಕಾರ್ಡುದಾರರಿಗೆ ನೀಡುವುದು.

ii. ಕಾರ್ಡುದಾರರಿಗೆ ಲಭ್ಯವಿರುವ ಸಾಲದ ಮಿತಿ ಯಾವುದೇ ಸಮಯ ಬಾಕಿ ಮೊತ್ತ ಮತ್ತು ಕಾರ್ಡುದಾರರಿಂದ ಇದಕ್ಕಿಂತ ಮೊದಲು ಮಾಡಿದ ಯಾವುದೇ ವ್ಯವಹಾರ, ಆದರೆ ಆ ದಿನಾಂಕದಂದು ಸಂಸ್ಕರಣೆಕ್ಕಾಗಿ ಬ್ಯಾಂಕಿನಿಂದ ಲಭ್ಯವಾಗದಿದ್ದರೇ, ಅದರ ಆಧಾರದ ಮೇಲೆ ಸಾಲದ ಮಿತಿ ನಿರ್ಧಾರವಾಗುತ್ತದೆ.

iii. ಬ್ಯಾಂಕ್ ತನ್ನ ಪೂರ್ಣ ವಿವೇಕಾಧಿಕಾರದ ಮೇಲೆ ಬ್ಯಾಂಕ್ ತನ್ನ ನೀತಿ- ನಿರ್ದೇಶನಗಳ ಅನುಸಾರವಾಗಿ ಪ್ರಮಾಣಿತ ಆದಾಯದ ಮೇಲೆ ಸಾಲದ ಮಿತಿ/ನಗದು ಮುಂಗಡ ಮಿತಿಯಲ್ಲಿ ನವೀಕರಣ, ವೃದ್ಧಿ/ಕಡಿತಗೊಳಿಸುವಿಕೆಗಳ ಪ್ರಸ್ತಾವವನ್ನು ಪರಿಗಣಿಸುವುದು.

iv. ಕ್ರೆಡಿಟ್ ಕಾರ್ಡ್ ರದ್ದಾದ ನಂತರ ಒಟ್ಟು ಮಿತಿಯೂ ಕೂಡ ಅಂತ್ಯವಾಗುವುದು.

v. ಕಾರ್ಡಿನ ಎಲ್ಲ ಪ್ರಕಾರಗಳ ನಗದು ಮಿತಿ ಈ ಕೆಳಗಿನಂತಿದೆ.

| | |
|---|---|
| **ವೀಸಾ ಗೋಲ್ಡ್** | **ಕಾರ್ಡ್ ಮಿತಿಯ 20%** |
| **ರುಪೈ ಪ್ಲಾಟಿನಂ/ವೀಸಾ ಪ್ಲಾಟಿನಂ/ಜೆಸಿಬಿ ಹೆಲ್ತ್** | **ಕಾರ್ಡ್ ಮಿತಿಯ 30%** |
| **ರುಪೈ ಸೆಲೆಕ್ಟ್/ವೀಸಾ ಸಿಗ್ನೆಚರ್/ಯೂನಿಯನ್ ಯೂನಿ-ಕಾರ್ಬನ್/ಜೆ ಸಿ ಬಿ ವೆಲ ನೆಸ್** | **ಕಾರ್ಡ್ ಮಿತಿಯ 40%** |
| **ಯೂನಿಯನ್ ಎಮ್ ಎಸ್ ಎಮ್ ಈ/ವೀಸಾ ಕಾರ್ಪೊರೇಟ್ ಬಿಸನೆಸ್ ಕಾರ್ಡ್** | **ನಗದು ಹಿಂಪಡೆಯುವಿಗೆ ಅನುಮತಿ ಇಲ್ಲ.** |

**ಸಿ. ಬಿಲ್ಲಿಂಗ್:**

ಕ್ರೆಡಿಟ್ ಕಾರ್ಡ್ ವಿಭಾಗದಿಂದ ಪ್ರತಿ ತಿಂಗಳು 25 ತಾರೀಖಿಗೆ ಕಾರ್ಡುದಾರರಿಂದ ನೀಡಿದ ನೋಂದಾಯಿತ ಈ-ಮೇಲ್ ಗೆ, 1. ಕಾರ್ಡ್ ನ ಮೂಲಕ ವ್ಯವಹಾರ ನಡೆಸಿದ್ದರೆ 2.ಕಾರ್ಡಿನಲ್ಲಿ ಬಾಕಿ ಮೊತ್ತ ಇದ್ದರೇ ಮತ್ತು ಕಾರ್ಡಿನಲ್ಲಿ ಯಾವುದೇ ಸಾಲದ ಮೊತ್ತ ಬಾಕಿ ಇದ್ದರೆ, ಬಿಲ್ ನ್ನು ಕಳುಹಿಸಲಾಗುವುದು.

i. ಬಿಲ್ ಮೊತ್ತದ ಬಾಕಿ ಹಣ ಪಾವತಿಯ ದಿನಾಂಕ ಮುಂದಿನ ತಿಂಗಳಿನ 14ನೇ/15ನೇ ತಾರೀಖು, ಅಂದರೆ ಬಿಲ್ಲಿಂಗ್ ದಿನಾಂಕಿನಿಂದ 20 ದಿನವಾಗಿರುವುದು.

ii. ಬಿಲ್ಲಿನ ವಿವರಣೆಯ ವಿಳಾಸವನ್ನು ತಿಳಿಯಲು ಕಾರ್ಡುದಾರರು 24X7 ರಾಷ್ಟ್ರೀಯ ಟೋಲ್-ಫ್ರೀ ಸಂಖ್ಯೆ 18004251515 ಅಥವಾ ದೂರವಾಣಿ ಸಂಖ್ಯೆ 040-24683219/3210/3220 ನ ಮೂಲಕ ಅಥವಾ ಕಛೇರಿಯ ಸಮಯದಲ್ಲಿ ಬ್ಯಾಂಕ್ ನ್ನು ಸಂಪರ್ಕಿಸಬಹುದಾಗಿದೆ.

iii. ಬಿಲ್ ಅಸ್ವೀಕಾರವಾದಲ್ಲಿ, ಒಪ್ಪಂದದ ಅಡಿಯಲ್ಲಿ ಕಾರ್ಡುದಾರರು ಬಾಧ್ಯತೆ ಅಥವಾ ಹೊಣೆಗಾರಿಕೆಯಿಂದ ಮುಕ್ತ ಎಂದು ಭಾವಿಸಲಾಗುವುದಿಲ್ಲ.ಕಾರ್ಡುದಾರರು ತಾವು ಕಾರ್ಡಿನ ಉಪಯೋಗ/ಚಾರ್ಜ್ ಸ್ಲಿಪ್ ನ ಆಧಾರದ ಮೇಲೆ ಅಥವಾ ಈ ಮೇಲ್ಕಾಣಿಸಿದ ಸಂಖ್ಯೆಗಳ ಮೂಲಕ ಬಿಲ್

ಮೊತ್ತದ ಬಗ್ಗೆ ವಿಚಾರಿಸಿ ಅಥವಾ ಮೊಬೈಲ್ ಆಪ್ (ಯೂನಿಯನ್ ಕ್ರೆಡಿಟ್ ಕಾರ್ಡ್ ಆಪ್/ವ್ಯೋಮ್) ನ ಮೂಲಕ ಬಿಲ್ ಮೊತ್ತವನ್ನು ಪಾವತಿಸಬೇಕೆಂದು ಅಪೇಕ್ಷಿಸಲಾಗುವುದು.

iv. **ರೋಲ್ ಓವರ್ ಕ್ರೆಡಿಟ್ ಸೌಲಭ್ಯ:** ಕಾರ್ಡುದಾರನ ಬಿಲ್ ನಲ್ಲಿ ನಮೂದಿಸಿದ ಹಾಗೆ "ಕನಿಷ್ಠ ಪಾವತಿಸಬೇಕಾದ ಮೊತ್ತ"(MAD) ವಿಕಲ್ಪವನ್ನು ಆಯ್ಕೆ ಮಾಡಿಕೊಳ್ಳಬಹುದು.ಎಮ್ ಎ ಡಿ ಒಟ್ಟು ಪಾವತಿಸಬೇಕಾದ ಬಾಕಿ ಮೊತ್ತದ 5% ರಷ್ಟು ಇರುತ್ತದೆ. ಕನಿಷ್ಠ ರೂ.100/-ಮತ್ತು ಕಳೆದ ತಿಂಗಳಿನ ಪಾವತಿಸಬೇಕಾದ ಬಾಕಿ ಮೊತ್ತ, ಇದ್ದರೇ, ಅಥವಾ ತಿಂಗಳಿನಲ್ಲಿ ಪಾವತಿಸಬೇಕಾದ ಕಂತು (EMI) ಪಾವತಿಸಬೇಕಾದ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಎಮ್ ಎ ಡಿ ಯ ಪಾವತಿ ಮಾಡಿದ್ದಲ್ಲಿ, ಬಾಕಿ ಮೊತ್ತವನ್ನುಮುಂದಿನ ತಿಂಗಳಿನ ರೋಲ್ ಓವರ್ ಮಾಡಲಾಗುವುದು. ರೋಲ್ ಓವರ್ ಬಾಕಿಯ ಮೇಲೆ "ಶುಲ್ಕಗಳು ಮತ್ತು ಪ್ರಭಾರಗಳು" ಖಾತೆಯಲ್ಲಿ ಉಲ್ಲೇಖಿಸಲಾದ ವಿತ್ತೀಯ ಶುಲ್ಕಗಳನ್ನು ವಿಧಿಸಲಾಗುವುದು.

v. ಕಾರ್ಡುದಾರರ ಒಟ್ಟು ಪಾವತಿಸಬೇಕಾದ ಮೊತ್ತ ಅಥವಾ ಎಮ್ ಎ ಡಿ ಅಥವಾ ಎ ಎಮ್ ಡಿ ಮತ್ತು ಒಟ್ಟು ಪಾವತಿಸಬೇಕಾದ ಬಾಕಿ ಮೊತ್ತದ ನಡುವೆ ಯಾವುದೇ ರೀತಿಯ ಮೊತ್ತದ ಪಾವತಿಸಲು ಸ್ವತಂತ್ರ ಇರುತ್ತಾರೆ.

vi. ಎಡ್-ಆನ್ ನ ಬಳಕೆಯಿಂದ ಆಗುವ ಬಾಕಿ ಮೊತ್ತದ ಪಾವತಿಯ ಜವಾಬ್ದಾರಿ ಮಾತ್ರ ಪ್ರಾಥಮಿಕ ಕಾರ್ಡುದಾರನದಾಗಿರುತ್ತದೆ.

vii. ಪ್ರತಿ ತಿಂಗಳು ಕೇವಲ ಕನಿಷ್ಠ ಮೊತ್ತದ ಪಾವತಿ ಮಾಡುವ ಪರಿಣಾಮದಿಂದ ಪಾವತಿಸಬೇಕಾದ ಬಾಕಿ ಮೊತ್ತದ ಮೇಲೆ ಚಕ್ರವೃದ್ಧಿ ಬಡ್ಡಿಯ ಪಾವತಿಯ ಜೊತೆಗೆ ಮರುಪಾವತಿಯ ಅವಧಿ ಹಲವು ತಿಂಗಳು/ವರ್ಷಗಳ ವರೆಗೆ ಇರುತ್ತದೆ.

**ಪಾವತಿ ಮಾಡುವ ವಿಧಾನ:**

I. ಕ್ರೆಡಿಟ್ ಕಾರ್ಡ್ ಬಿಲ್ಲುಗಳ ಪಾವತಿಯನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಲ್ಲ ಶಾಖೆಗಳ ಕೌಂಟರ್ ಗಳಲ್ಲಿ ನಗದು ಅಥವಾ ಚೆಕ್ ಮುಖಾಂತರ ಅಥವಾ ಯಾವುದೇ ಬೇರೆ ಬ್ಯಾಂಕಿನ ಚೆಕ್/ಡಿ ಡಿ ಮೂಲಕ ಸ್ವೀಕರಿಸಲಾಗುವುದು.

II. ಗ್ರಾಹಕರು ತಮ್ಮ ಲಿಂಕ್ ಮಾಡಲಾದ ಸಕ್ರಿಯ ಖಾತೆಯಿಂದ "ಒಟ್ಟು ಬಿಲ್ ಮೊತ್ತ" ಅಥವಾ "ಕನಿಷ್ಠ ಪಾವತಿಯಬೇಕಾದ ಮೊತ್ತ" ದ ಪಾವತಿಗಾಗಿ ಸ್ಥಾಯಿ ಸೂಚನೆಗಳನ್ನು/ಆಟೋ ಡೆಬಿಟ್ ನ ಆಯ್ಕೆಯನ್ನು ಮಾಡಬಹುದು. ಪಾವತಿಸಬೇಕಾದ ಸ್ಥಾಯಿ ಸೂಚನೆಗಳನ್ನು ಕಾರ್ಯಗತಗೊಳಿಸಲು ಸಕ್ರಿಯ ಖಾತೆಗಳಲ್ಲಿ ಸಾಕಷ್ಟು ಹಣ ಜಮೆ ಇಟ್ಟಿರಬೇಕು.

III. ಯಾವ ಕಾರ್ಡುದಾರ ಇಂಟರ್ ನೆಟ್ ಬ್ಯಾಂಕಿಂಗ್ ಸೌಲಭ್ಯದ ಆಯ್ಕೆಯನ್ನು ಮಾಡಿದ್ದಾರೋ, ಅವರು https://www.unionbankofindia.co.in ನಲ್ಲಿ ಲಾಗಿನ್ ಮಾಡಿ ನೀಡಿರುವ ಸೌಲಭ್ಯಗಳ ಮೂಲಕ ಬಾಕಿ ಹಣವನ್ನು ಪಾವತಿಸಬಹುದಾಗಿದೆ.

IV. ಕ್ರೆಡಿಟ್ ಕಾರ್ಡುದಾರ ಯಾವುದೇ ಬೇರೆ ಬ್ಯಾಂಕಿನಿಂದ ಎನ್ ಈ ಎಫ್ ಟಿ/ಆಯ್ ಎಮ್ ಪಿ ಎಸ್ ನ ಮೂಲಕವೂ ಕೂಡ ಬಾಕಿಯನ್ನು ಪಾವತಿಸಬಹುದಾಗಿದೆ. ಈ ತರಹದ ಕಾರ್ಡುದಾರರು ಕ್ರೆಡಿಟ್ ಕಾರ್ಡ್ ನಂಬರ್ ನೊಂದಿಗೆ ತನ್ನ ಬ್ಯಾಂಕಿನ ಈ ಕೆಳಗಿನ ವಿವರಣೆಗಳನ್ನು ಕೊಡಬೇಕಾಗುವುದು.

| | | |
|---|---|---|
| ಫಲಾನುಭವಿ ಬ್ಯಾಂಕಿನ ಹೆಸರು | : | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ |
| ಶಾಖೆಯ ಹೆಸರು | : | ಕ್ರೆಡಿಟ್ ಕಾರ್ಡ್ ಮತ್ತು ಎಮ್ ಎ ಬಿ ವಿಭಾಗ |
| ಐ ಎಫ್ ಎಸ್ ಸಿ ಕೋಡ್ | : | UBIN0807826 |
| ಫಲಾನುಭವಿಯ ಖಾತೆಯ ಸಂಖ್ಯೆ | : | 16 ಅಂಕಗಳ ಕ್ರೆಡಿಟ್ ಕಾರ್ಡ್ ಸಂಖ್ಯೆ |

**ಅತೀ ಮಹತ್ವಪೂರ್ಣ ನಿಯಮಗಳು ಹಾಗೂ ಷರತ್ತುಗಳು (ಎಂಆಯ್ ಟಿಸಿ)**

ಫಲಾನುಭವಿಯ ಹೆಸರು : ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಎಮ್ ಎ ಬಿ ವಿಭಾಗ
ಕಳುಹಿಸುವವರ ವಿವರ : ಮೊಬೈಲ್ ಸಂಖ್ಯೆ ಮತ್ತು ಈ-ಮೇಲ್ ಐಡಿ

ಪಾವತಿಯನ್ನು ಯೂಪಿಐ ಮತ್ತು ಪೇಮೆಂಟ್ ಗೇಟ್ ವೇ ದ ಮೂಲಕ ಮಾಡಬಹುದು.
ಯೂಪಿಐ ನ ಮೂಲಕ ಪಾವತಿ (ವರ್ಚುವಲ್ ಪೇಮೆಂಟ್ ಅಡ್ರೆಸ್) ಈ ಕೆಳಗಿನಂತೆ ಆಗುವುದು:
CC<xxxxxxxx>@ubicard; ಎಲ್ಲಿ <xxxxxxxx> ಕ್ರೆಡಿಟ್ ಕಾರ್ಡ್ ಗ್ರಾಹಕ ಐಡಿ ಇರುತ್ತದೆ.

V. ಚೆಕ್ ತಿರಸ್ಕೃತವಾದ ಸಂದರ್ಭದಲ್ಲಿ, ಸಾಕಷ್ಟು ಬಾಕಿ ಮೊತ್ತದ ಕಾರಣದಿಂದ ಅಥವಾ ಯಾವುದೇ ಅನ್ಯ ಕಾರಣದಿಂದಾಗಿ ಸ್ಥಾಯಿ ಸೂಚನೆಗಳು ಜಾರಿಯಾಗದೇ ಇದ್ದಲ್ಲಿ, ನೆಗೋಶೇಬಲ್ ಇನ್ಸ್ಟ್ರುಮೆಂಟ್ ಅಧಿನಿಯಮ ಸೆಕ್ಷನ್ 138ನೇ ಅಡಿಯಲ್ಲಿ ಚೆಕ್ ವಾಪಸಾತಿ ಮತ್ತು ಸೇವಾ ಶುಲ್ಕ ಸಹಿತ ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರವನ್ನು ಬ್ಯಾಂಕು ಕಾಯ್ದಿರಿಸಿದೆ.

VI. ಕಾರ್ಡುದಾರರಿಂದ ಮಾಸಿಕ ಬಿಲ್ಲಿನ ಅನುಸಾರ ಪಾವತಿಸಬೇಕಾದ ಬಾಕಿ ಮೊತ್ತದ ಹಣಕ್ಕಿಂತ ಹೆಚ್ಚಿನ ಹಣ ಪಾವತಿಸಿದ್ದಲ್ಲಿ, ಕಾರ್ಡುದಾರ ಪಾವತಿಸಿದ ಹೆಚ್ಚಿನ ಮೊತ್ತದ ಮೇಲಿನ ಯಾವುದೇ ಬಡ್ಡಿಯ ಹಕ್ಕುದಾರರಾಗಿರುವುದಿಲ್ಲ. ಈ ಮೊತ್ತವನ್ನು ಮುಂದಿನ ತಿಂಗಳಿನ ಬಿಲ್ಲಿನಲ್ಲಿ ಪಾವತಿಸಬೇಕಾದ ಹಣದ ಜೊತೆಗೆ ಹೊಂದಾಣಿಕೆ ಮಾಡಲಾಗುವುದು.

VII. ಕಾರ್ಡುದಾರರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ವಿಳಾಸ, ನೋಂದಾಯಿತ ಮೊಬೈಲ್ ಸಂಖ್ಯೆ, ದೂರವಾಣಿ ಸಂಖ್ಯೆ ಅಥವಾ ಈ-ಮೇಲ್ ಐಡಿಯಲ್ಲಿ ಬದಲಾವಣೆಯಾದಲ್ಲಿ, ಬ್ಯಾಂಕಿಗೆ ಇದರ ಸೂಚನೆ ತಕ್ಷಣ ನೀಡಬೇಕು.

VIII. **ಬಿಲ್ಲಿಂಗ್ ವಿವಾದಗಳು:** ಮಾಸಿಕ ಬಿಲ್ಲಿನ ಎಲ್ಲ ವಿಷಯಗಳು ಸರಿಯಾಗಿವೆ ಮತ್ತು ಕಾರ್ಡುದಾರರಿಂದ ಅಂಗೀಕರಿಸಲ್ಪಟ್ಟಿದೆ ಎಂದು ಪರಿಗಣಿಸಲಾಗುತ್ತದೆ. ಕಾರ್ಡುದಾರರು ಯಾವುದೇ ವ್ಯತ್ಯಾಸದ ಬಗ್ಗೆ ಬ್ಯಾಂಕಿಗೆ ಬಿಲ್ ನ ಮುಂಚಿನ ದಿನಾಂಕದ ಮೊದಲು ತಿಳಿಸದೇ ಹೊರತು, ಲಿಖಿತ ದೂರಿನ ಸ್ವೀಕೃತಿಯ ಮೇಲೆ, ಬ್ಯಾಂಕ್ ವೀಸಾ/ವೀಸಾ/ಎನ್ ಪಿ ಸಿ ಐ ವಿವಾದ ಪರಿಹಾರ ಪ್ರಕ್ರಿಯೆಗೆ ಅನುಗುಣವಾಗಿ ತನಿಖೆ ನಡೆಸುತ್ತದೆ ಮತ್ತು ಯಾವುದೇ ವ್ಯತ್ಯಾಸವನ್ನು ಸರಿಪಡಿಸುತ್ತದೆ.
ಕಾರ್ಡುದಾರರು ಈ ಕೆಳಗಿನ ಯಾವುದೇ ವಿಧಾನಗಳ ಮೂಲಕ ಯಾವುದೇ ಪ್ರಶ್ನೆಗಳು ಅಥವಾ ಕುಂದುಕೊರತೆ ಪರಿಹಾರಕ್ಕಾಗಿ ಬ್ಯಾಂಕ್ ನ್ನು ಸಂಪರ್ಕಿಸಬಹುದಾಗಿದೆ.
1) 24X7 ಟೋಲ್ -ಫ್ರೀ ಸಂಖ್ಯೆ 1800-425-1515
2) 040-24683210/3219/3220 (ಕಚೇರಿಯ ಸಮಯದಲ್ಲಿ ಗ್ರಾಹಕ ಸೇವಾ ಅಧಿಕಾರಿಯಿಂದ)
3) ಈ-ಮೇಲ್ ನ ಮೂಲಕ: ccdhelpdesk@unionbankofindia.bank
4) ಕಾರ್ಡುದಾರನಿಗೆ ನಿಗದಿತ ಸಮಯದಲ್ಲಿ ಪ್ರತಿಕ್ರಿಯೆ ಸಿಗದೇ ಇದ್ದರೆ, ಕಾರ್ಡುದಾರಕ ಕ್ರೆಡಿಟ್ ಕಾರ್ಡ್ ಮತ್ತು ಎಮ್ ಎ ಬಿ ವಿಭಾಗ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸುಲ್ತಾನ್ ಬಜಾರ್, ಹೈದರಾಬಾದ ನ ದೂರವಾಣಿ ಸಂಖ್ಯೆ 040-24683209 ನಲ್ಲಿ ಸಂಪರ್ಕಿಸಿ ಅಥವಾ ಈ-ಮೇಲ್ ಐಡಿ: ccd.grievances@unionbankofindia.bank ನಲ್ಲಿ ಈ-ಮೇಲ್ ಕಳುಹಿಸಿ ಕ್ರೆಡಿಟ್ ಕಾರ್ಡ್ ಮತ್ತು ಎಮ್ ಎಬಿ ವಿಭಾಗದಲ್ಲಿ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನು ಸಂಪರ್ಕಿಸಬಹುದಾಗಿದೆ.

**ಡಿ. ಡೀಫಾಲ್ಟ್ ಸಂದರ್ಭದಲ್ಲಿ:**

**ಅತೀ ಮಹತ್ವಪೂರ್ಣ ನಿಯಮಗಳು ಹಾಗೂ ಷರತ್ತುಗಳು (ಎಂಆಯ್ ಟಿಸಿ)**

ಯಾವುದೇ ಕಾರ್ಡುದಾರರನ್ನು ಡೀಪಾಲ್ಟರ್ ಎಂದು ರಿಪೋರ್ಟ್ ಮಾಡುವ ಮೊದಲು, ಅಂತಹ ಕಾರ್ಡುದಾರರನ್ನುಡೀಪಾಲ್ಟರ್ ಎಂದು ವರದಿ ಮಾಡುವ ಉದ್ದೇಶವನ್ನು ಸೂಚಿಸುವ ಏಳು ದಿನಗಳ ನೋಟೀಸ್ ಅವಧಿಯನ್ನು ಬ್ಯಾಂಕ್ ನೀಡುತ್ತದೆ.
ಕಾರ್ಡುದಾರರು, ಡೀಪಾಲ್ಟರ್ ಎಂದು ವರದಿ ಮಾಡಿದ ನಂತರ, ಬಾಕಿಗಳನ್ನು ಇತ್ಯರ್ಥಪಡಿಸಿದರೆ, ಬಾಕಿಯ ಇತ್ಯರ್ಥದ ದಿನಾಂಕದಿಂದ 30 ದಿನಗಳಲ್ಲಿ ಬ್ಯಾಂಕ್ ಸ್ಥಿತಿಯನ್ನು ನವೀಕರಿಸುತ್ತದೆ.

**ವಿಶೇಷ ಉಲ್ಲೇಖಿತ ಖಾತೆಗಳು (ಎಸ್ ಎಮ್ ಎ):**
ನಿಯಂತ್ರಕ ಮಾರ್ಗಸೂಚಿಗಳ ಪ್ರಕಾರ, ಬ್ಯಾಂಕುಗಳು ಉಪ-ಆಸ್ತಿ ವರ್ಗಗಳ ಪ್ರಕಾರ ವಿಶೇಷ ಉಲ್ಲೇಖ ಖಾತೆಗಳು (ಎಸ್ ಎಮ್ ಎ) ಒತ್ತಡಕ್ಕೊಳಗಾದ ಖಾತೆಗಳನ್ನು ಗುರುತಿಸುವ ಅಗತ್ಯವಿದೆ.
ಎಸ್ ಎಮ್ ಎ ಯನ್ನು ಅಸಲು ಅಥವಾ ಬಡ್ಡಿ ಪಾವತಿ ಅಥವಾ ಯಾವುದೇ ಇತರ ಮೊತ್ತವು ಸಂಪೂರ್ಣವಾಗಿ ಅಥವಾ ಭಾಗಶ: ವಿಳಂಬವಾಗಿದೆಯೇ ಎಂಬುದರ ಆಧಾರದ ಮೇಲೆ ವರ್ಗೀಕರಿಸಲಾಗಿದೆ.
**ಎಸ್ ಎಮ್ ಎ 0 (ಪಾವತಿಯ ದಿನಾಂಕದಿಂದ 30 ದಿನಗಳ ವರೆಗೆ)**
**ಎಸ್ ಎಮ್ ಎ 1 (ಪಾವತಿಯ ಅಂತಿಮ ದಿನಾಂಕದಿಂದ 30 ದಿನಗಳಿಗಿಂತ ಹೆಚ್ಚು ಮತ್ತು 60 ದಿನಗಳ ವರೆಗೆ)**
**ಎಸ್ ಎಮ್ ಎ 2 (ಪಾವತಿಯ ಅಂತಿಮ ದಿನಾಂಕದಿಂದ 60 ದಿನಗಳಿಗಿಂತ ಹೆಚ್ಚು ಮತ್ತು 90 ದಿನಗಳ ವರೆಗೆ)**

**ಅನುತ್ಪಾದಕ ಆಸ್ತಿ (ಎನ್ ಪಿ ಎ) :**

ವಿವರಣೆಗಳಲ್ಲಿ ಉಲ್ಲೇಖಿಸಿದಂತೆ, ನಿಗದಿತ ದಿನಾಂಕದಿಂದ 90 ದಿನಗಳಲ್ಲಿ ಎಮ್ ಎ ಡಿ ಮೊತ್ತವನ್ನು ಪಾವತಿಸದಿದ್ದರೆ ಕ್ರೆಡಿಟ್ ಕಾರ್ಡ್ ಖಾತೆಯನ್ನು ಅನುತ್ಪಾದಕ (ಎನ್ ಪಿ ಎ) ಎಂದು ಪರಿಗಣಿಸಲಾಗುತ್ತದೆ.

ಬಾಕಿ ಮೊತ್ತ ಪಾವತಿಸದ ಸಂದರ್ಭದಲ್ಲಿ, ಕಾರ್ಡುದಾರರನ್ನು ದೂರವಾಣಿ, ಎಸ್ ಎಮ್ ಎಸ್, ಈ-ಮೇಲ್ ಮೂಲಕ ಆಗಾಗ ಕಾರ್ಡ್ ಖಾತೆಯಲ್ಲಿ ಬಾಕಿ ಮೊತ್ತವನ್ನು ಪಾವತಿಸಲು ಜ್ಞಾಪನೆಗಳನ್ನು/ಸೂಚನೆಗಳನ್ನು ಕಳುಹಿಸಲಾಗುತ್ತದೆ. ಬ್ಯಾಂಕ್ ಸಿಬ್ಬಂದಿ ಅಥವಾ ಮೂರನೇ ವ್ಯಕ್ತಿಗಳನ್ನು ಕಾರ್ಡುದಾರರನ್ನು ಜ್ಞಾಪಿಸಲು, ಸಂಪರ್ಕಿಸಲು ಮತ್ತು ಬಾಕಿ ಮೊತ್ತವನ್ನು ಮರುಪಾವತಿಸಲು ವೈಯಕ್ತಿಕವಾಗಿ ಸಂಪರ್ಕಿಸುತ್ತಾರೆ. ಹೀಗೆ ನೇಮಕಗೊಂಡ ಯಾವುದೇ ಮೂರನೇ ವ್ಯಕ್ತಿ ಸಾಲದಾರರಿಗೆ ನ್ಯಾಯಯುತ ಆಚರಣೆಗಳನ್ನು ಅನುಸರಿಸಬೇಕು. ಬಾಕಿ ಮೊತ್ತ ಪಾವತಿಯಾಗದ ಸಂದರ್ಭದಲ್ಲಿ ಬ್ಯಾಂಕ್ ಕಾರ್ಡುದಾರರು/ಅವರ ಉತ್ತರಾಧಿಕಾರಿಗಳ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸುವ ಹಕ್ಕನ್ನು ಕಾಯ್ದಿರಿಸಿದೆ.
ಈ ಕೆಳಕಂಡ ಅಂಶಗಳಲ್ಲಿ ಒಂದು ಅಥವಾ ಅಧಿಕ ಸಂದರ್ಭಗಳಲ್ಲಿ ವೈಫಲ್ಯದ ಸ್ಥಿತಿ ಎಂದು ಪರಿಗಣಿಸಲಾಗುವುದು ಮತ್ತು ಬ್ಯಾಂಕ್ ತನ್ನ ವಿವೇಚನೆಯಂತೆ, ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ಹಿಂಪಡೆಯಬಹುದು.

- ಕಾರ್ಡುದಾರ ನಿರ್ದಿಷ್ಟ ಅವಧಿಯಲ್ಲಿ ಬ್ಯಾಂಕಿಗೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಪಾವತಿಸಲು ವಿಫಲವಾದಲ್ಲಿ.
- ಕ್ರೆಡಿಟ್ ಕಾರ್ಡ್ ನ ಅರ್ಜಿ/ಒಪ್ಪಂದದ ಪ್ರಕಾರ ಕಾರ್ಡುದಾರ ತನ್ನ ಜವಾಬ್ದಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಫಲವಾದಲ್ಲಿ,
- ಕಾರ್ಡುದಾರ ಬ್ಯಾಂಕಿಗೆ ಸಲ್ಲಿಸಿದ ಪ್ರಾತಿನಿಧ್ಯ/ಆದಾಯ ಮತ್ತು ಅಥವಾ ಫೋಟೋ ಮತ್ತು ವಿಳಾಸದ ಗುರುತಿನ ದಸ್ತಾವೇಜುಗಳು) ತಪ್ಪು ಅಥವಾ ಅಪೂರ್ಣ ಎಂದು ಸಾಬೀತಾದಲ್ಲಿ.

UNION BANK OF INDIA
Credit Card & MAB Dept. Hyd.

## ಅತೀ ಮಹತ್ವಪೂರ್ಣ ನಿಯಮಗಳು ಹಾಗೂ ಷರತ್ತುಗಳು (ಎಂಐಆಯ್ ಟಿಸಿ)

- ಬಾಕಿ ಇರುವ ಕನಿಷ್ಠ ಮೊತ್ತ ಅಥವಾ ಸಂಪೂರ್ಣ ಮೊತ್ತ ಪಾವತಿಸುವಲ್ಲಿ ವಿಫಲವಾದಲ್ಲಿ, ಸಿಬಿಲ್ ಅಥವಾ ಆರ್ ಬಿ ಆಯ್ ಇಂದ ಅನುಮೋದಿಸಲಾದ ಯಾವುದೇ ಕ್ರೆಡಿಟ್ ಮಾಹಿತಿ ಕಂಪನಿಗೆ ಕಾರ್ಡುದಾರನ ವೈಫಲ್ಯತೆಯ ಮಾಹಿತಿ ನೀಡತಕ್ಕದ್ದು.
- ಬ್ಯಾಂಕಿನ ಪೂರ್ಣ ಸಂತುಷ್ಟಿಯ ಮೇರೆಗೆ ಬಾಕಿ ಮೊತ್ತವನ್ನು ಕಾರ್ಡುದಾರನು ಹಿಂದುರುಗಿಸಿದ್ದೇ ಆದರೆ, ಬಾಕಿ ಮೊತ್ತವನ್ನು ಕಟ್ಟಿದ 30 ದಿನಗಳ ಒಳಗಾಗಿ ವಿಫಲತೆಯ ರಿಪೋರ್ಟ್ ನ್ನು ಹಿಂಪಡೆಯಲಾಗುವುದು.
- ಕಾರ್ಡುದಾರನು ಮೃತಪಟ್ಟ ಸಂದರ್ಭದಲ್ಲಿ, ಅವನ ಕಾನೂನಿನ ರೀತ್ಯ ವಾರಸುದಾರರ ವಿರುದ್ಧ ಮುಂದುವರೆಯುವ ಅಧಿಕಾರವನ್ನು ಬ್ಯಾಂಕ್ ಹೊಂದಿರುತ್ತದೆ.

**ವಿಮೆಯ ರಕ್ಷಣೆ:**

ಸಮೂಹ ವೈಯಕ್ತಿಕ ದುರ್ಘಟನಾ ವಿಮೆ ರಕ್ಷಣೆ ಈ ಕೆಳಗೆ ಉಲ್ಲೇಖಿಸಿದಂತೆ ಲಭ್ಯವಿದ್ದು, ಇದರ ಪ್ರೀಮಿಯಮ್ ಕಂತನ್ನು ಸ್ವತ: ಕಾರ್ಡುದಾರರೇ ಭರಿಸಬೇಕಾಗುವುದು.

| ಕ್ರ.ಸಂಖ್ಯೆ | ಪ್ರಕಾರಗಳು | ದುರ್ಘಟನಾ ಮೃತ್ಯು ವಿಮೆ ರಕ್ಷಣೆ (ರೂ.ಗಳಲ್ಲಿ) |
|---|---|---|
| 1 | ವೀಸಾ ಗೋಲ್ಡ್/ವೀಸಾ ಕ್ಲಾಸಿಕ್ | 5,00,000/- |
| 2 | ವೀಸಾ ಪ್ಲಾಟಿನಂ | 10,00,000/- |
| 3 | ವೀಸಾ ಬ್ಯುಸಿನೆಸ್ ಪ್ಲಾಟಿನಂ | ಶೂನ್ಯ |
| 4 | ವೀಸಾ ಸಿಗ್ನೇಚರ್ | 30,00,000/- |
| 5 | ರುಪೈ ಪ್ಲಾಟಿನಂ | 10,00,000/- |
| 6 | ಯೂನಿಯನ್ ಯೂನಿ-ಕಾರ್ಬನ್ (ರುಪೈ ಪ್ಲಾಟಿನಂ ನ ಪ್ರಕಾರ) | 10,00,000/- |
| 7 | ರುಪೈ ಸೆಲೆಕ್ಟ್ | 30,00,000/- |

ಈ ಮೇಲ್ಕಂಡವುಗಳಲ್ಲದೇ, ವರ್ತಮಾನ ಸಮಯದಲ್ಲಿ ಕೆಳಕಂಡ ದುರ್ಘಟನಾ ಮೃತ್ಯು ವಿಮೆಯ ರುಪೈ ಕಾರ್ಡುದಾರರಿಗೆ ಯಾವುದೇ ಶುಲ್ಕವಿಲ್ಲದೇ ಕೊಡಲಾಗುತ್ತದೆ.ಪ್ರಮುಖ ಹಾಗೂ ಎಡ್ ಆನ್ ಕಾರ್ಡುಗಳ ಪ್ರೀಮಿಯಮ್ ನ್ನು ಎನ್ ಪಿ ಸಿ ಐ ಭರಿಸುವುದು.

| ಕ್ರ.ಸಂ. | ಕಾರ್ಡಿನ ಪ್ರಕಾರ | ದುರ್ಘಟನಾ ಮೃತ್ಯು ವಿಮೆಯ ರಕ್ಷಣೆ |
|---|---|---|
| 1 | ರುಪೈ ಪ್ಲಾಟಿನಂ | 2,00,000/- |
| 2 | ಯೂನಿಯನ್ ಯೂನಿ-ಕಾರ್ಬನ್ (ರುಪೈ ಪ್ಲಾಟಿನಂ ನ ಪ್ರಕಾರ) | 10,00,000/- |
| 3 | ರುಪೈ ಸೆಲೆಕ್ಟ್ | 10,00,000/- |

ಪಾಲಿಸಿ ಒದಗಿಸುವವರು ಸಹಿತ ವಿಮೆಯ ಮೊತ್ತ, ಪ್ರೀಮಿಯಮ್, ಪಾಲಿಸಿಯ ಅವಧಿ ಕಾಲ-ಕಾಲಕ್ಕೆ ಪರಿವರ್ತನೆಗೆ ಒಳಪಟ್ಟಿರುತ್ತವೆ. ಇತ್ತೀಚಿನ ಮಾಹಿತಿಗಾಗಿ ದಯವಿಟ್ಟು ನಮ್ಮ ಕ್ರೆಡಿಟ್ ಕಾರ್ಡ್ ವೆಬಸೈಟ್ https://unionbankofindia.co.in/ ನ್ನು ಸಂಪರ್ಕಿಸಿ.

**ಅತೀ ಮಹತ್ವಪೂರ್ಣ ನಿಯಮಗಳು ಹಾಗೂ ಷರತ್ತುಗಳು (ಎಂಆಯ್ ಟಿಸಿ)**

**ಅಪಘಾತ ಮರಣ ವಿಮೆಯ ರಕ್ಷಣೆ ಮತ್ತು ಪಾವತಿಸಬೇಕಾದ ಪ್ರೀಮಿಯಂ ವಿವರಗಳು:**

i. ದಾವೆಯ ಇತ್ಯರ್ಥದ ಸಂದರ್ಭದಲ್ಲಿ, ಬ್ಯಾಂಕ್ ತನ್ನ ವಿವೇಚನೆಯಿಂದ ಮೊದಲ ವಿಮಾ ದಾವೆಯ ಆದಾಯವನ್ನು ಕಾರ್ಡಿನ ಖಾತೆಯಲ್ಲಿ ಕಾರ್ಡುದಾರನ ಎಲ್ಲ ಬಾಕಿ ಇರುವ ಬಾದ್ಯತೆಗಳು ಮತ್ತು ಮೃತ ಕಾರ್ಡುದಾರನಿಗೆ ಸೇರಿದ ಯಾವುದೇ ಇತರೇ ಸಾಲಗಳು ಮತ್ತು ಮುಂಗಡಗಳೊಂದಿಗೆ ಹೊಂದಿಸುತ್ತಾರೆ.

ii. ಬ್ಯಾಂಕ್ ವಿಮೆಯ ದಾವೆಗಳ ಇತ್ಯರ್ಥದಲ್ಲಿ, ಕೇವಲ ಫಸಿಲೇಟೇಟರ್ ಆಗಿದ್ದೂ, ಮತ್ತು ಯಾವುದೇ ಧಾವೆಯ ಇತ್ಯರ್ಥವು ಪಾಲಿಸಿಯ ನಿಯಮಗಳು ಮತ್ತು ಷರತ್ತುಗಳು ಪ್ರಕಾರ ವಿಮಾ ಕಂಪನಿಯ ವಿವೇಚನೆಗೆ ಒಳಪಟ್ಟಿರುತ್ತದೆ. ಧಾವೆಯ ಇತ್ಯರ್ಥದಲ್ಲಿ ಯಾವುದೇ ವಿವಾದವು ವಿಮಾ ಕಂಪನಿಯ ವಿವೇಚನೆಗೆ ಒಳಪಟ್ಟಿರುತ್ತದೆ. ಆದಾಗ್ಯೂ, ಪಾಲಿಸಿಯ ನಿಯಮಗಳ ಪ್ರಕಾರ ಮತ್ತು ಬ್ಯಾಂಕ್ ಈ ವಿಷಯದಲ್ಲಿ ಯಾವುದೇ ಜವಾಬ್ದಾರಿ ಅಥವಾ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವುದಿಲ್ಲ.

iii. ಕ್ರೆಡಿಟ್ ಕಾರ್ಡ್ ನ್ನು ಸಕ್ರಿಯಗೊಳಿಸಿದ ದಿನಾಂಕದಂದು ಬ್ಯಾಂಕ್ ಕ್ರೆಡಿಟ್ ಕಾರ್ಡುದಾರರ ಖಾತೆಯಿಂದ ಪ್ರೀಮಿಯಂ ಅನ್ನು ಡೆಬಿಟ್ ಮಾಡುತ್ತದೆ. ಆದ್ದರಿಂದ ಕ್ರೆಡಿಟ್ ಕಾರ್ಡುದಾರರ ಖಾತೆಯಿಂದ ಪ್ರೀಮಿಯಂ ಡೆಬಿಟ್ ಮಾಡಿದ ದಿನಾಂಕದಿಂದ ಕಾರ್ಡುದಾರರಿಗೆ ವಿಮೆಯ ರಕ್ಷಣೆ ನೀಡಲಾಗುತ್ತದೆ.

iv. ಕಾರ್ಡುದಾರರು ಬ್ಯಾಂಕಿನ ಕಾರ್ಡುದಾರರಾಗಿ ಮುಂದವರಿಯುವವರೆಗೆ ಮತ್ತು ಅವರ ಕಾರ್ಡ್ ಖಾತೆಯು ಸಕ್ರಿಯವಾಗಿರುವವರೆಗೆ ಒದಗಿಸಲಾದ ಅಪಘಾತ ವಿಮಾ ರಕ್ಷಣೆಯು ಕಾರ್ಡದಾರರಿಗೆ ಲಭ್ಯವಿರುತ್ತದೆ.

v. ರುಪೈ ಪ್ರಕಾರದ ಕಾರ್ಡುಗಳಿಗೆ, ಎನ್ ಪಿ ಸಿ ಐ ನೀಡುವ ವಿಮಾ ರಕ್ಷಣೆಗೆ ಅರ್ಹರಾಗಲು,ಕಾರ್ಡುದಾರರು ಯಾವುದೇ ಪಿಒಎಸ್/ಈ-ಕಾಮ್ ನಲ್ಲಿ ಕನಿಷ್ಠ ಒಂದು ಯಶಸ್ವಿ ವ್ಯವಹಾರವನ್ನು ಮಾಡಿರಬೇಕು, ಅಂದರೆ, ಕಾರ್ಡುದಾರರ ಅಪಘಾತದ ದಿನಾಂಕ ಸೇರಿದಂತೆ ಅಪಘಾತದ ದಿನಾಂಕದ ಮೊದಲು 30 ದಿನಗಳ ಒಳಗೆ ಇಂಟ್ರಾ ಬ್ಯಾಂಕ್ (ಬ್ಯಾಂಕಿನ ಒಳಗೆ) ಮತ್ತು ಇಂಟರ್-ಬ್ಯಾಂಕ್ (ಬ್ಯಾಂಕಿನ ಹೊರಗೆ) ರುಪೈ ಆನ್-ಅಸ್ ಅಥವಾ ಆಫ್-ಅಸ್ ವ್ಯವಹಾರವನ್ನು ಮಾಡಿರಬೇಕು.

vi. ದುರ್ಘಟನಾ ಮರಣ ವಿಮೆಯ ರಕ್ಷಣೆಯನ್ನು ಹೊಂದಲು ಇಚ್ಚಿಸುವ ಕಾರ್ಡುದಾರನು ನಾಮಿನಿಯ ಹೆಸರು, ವಯಸ್ಸು ಹಾಗೂ ಕಾರ್ಡುದಾರನೊಡನೆ ಹೊಂದಿರುವ ಸಂಬಂಧ ಇತ್ಯಾದಿ ವಿವರಣೆಯನ್ನು ಸ್ಪಷ್ಟವಾಗಿ ಲಿಖಿತವಾಗಿ ಅಥವಾ ಡಿಜಿಟಲ್ ಪ್ರಕಾರವಾಗಿ ನೀಡಿ, ವಿಮೆಯ ರಕ್ಷಣೆಯನ್ನು ಪಡೆಯಬಹುದಾಗಿದೆ.

**ಈ. ಸಮಾಪ್ತಿ/ರಿವೊಕೇಶನ್:**

i. ಕಾರ್ಡುದಾರ ಬ್ಯಾಂಕಿಗೆ ಲಿಖಿತವಾಗಿ ಅಥವಾ ಮೀಸಲಾದ ಈ-ಮೇಲ್ ಐಡಿ, ಐ ವಿ ಆರ್ ಎಸ್ ಅಥವಾ ಎಸ್ ಎಮ್ ಎಸ್ ಸಂದೇಶದ ಮೂಲಕ ಯಾವುದೇ ಸಮಯದಲ್ಲಿ ಒಪ್ಪಂದವನ್ನು ಮುಕ್ತಾಯಗೊಳಿಸುವ ಸ್ವಾತಂತ್ರ್ಯವಿದೆ ಕಾರ್ಡ್ ಖಾತೆಯಲ್ಲಿನ ಒಟ್ಟು ಬಾಕಿಗಳನ್ನು ಪಾವತಿಸಿದ ನಂತರವೇ ಮುಕ್ತಾಯ ಪರಿಣಾಮಕಾರಿಯಾಗಿರುತ್ತದೆ.

ii. ಕ್ರೆಡಿಟ್ ಕಾರ್ಡ್ ರದ್ದತಿಗಾಗಿ, ಕಾರ್ಡುದಾರ https://unionbankofindia.co.in/ ವೆಬ್ ಸೈಟ್ ಕೂ ಕೂಡ ಸಂಪರ್ಕಿಸಬಹುದಾಗಿದೆ.

iii. ಕಾರ್ಡುದಾರಣನ ಮರಣ ಅಥವಾ ದಿವಾಳಿತನದ ಮೇಲೆ ಒಪ್ಪಂದವು ಕೊನೆಗೊಳ್ಳುತ್ತದೆ. ಮತ್ತು ಕಾರ್ಡುದಾರನ ಮರಣ ಅಥವಾ ದಿವಾಳಿತನದ ಮೇಲೆ ತಕ್ಷಣವೇ ಕಾರ್ಡಿಗೆ ಸಂಪೂರ್ಣ ಬಾಕಿಯನ್ನು ಮರುಪಡೆಯಲು ಬ್ಯಾಂಕ್ ಅರ್ಹವಾಗಿರುತ್ತದೆ.

iv. ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಯಾವುದೇ ಸಮಯದಲ್ಲಿ ಒಪ್ಪಂದವನ್ನು ಮುಕ್ತಾಯಗೊಳಿಸಬಹುದು ಮತ್ತು ಯಾವುದೇ ಕಾರಣವನ್ನು ನೀಡದೇ ಮತ್ತು ಅದರ ಪೂರ್ವ ಸೂಚನೆ

ಇಲ್ಲದೇ ಕಾರ್ಡುಗಳ ಬಳಕೆಯನ್ನು ನಿರ್ಭಂಧಿಸಬಹುದು. ಆದಾಗ್ಯೂ ಅಂತಹ ಕ್ರಮದ ಬಗ್ಗೆ ಕಾರ್ಡುದಾರರಿಗೆ ಸೂಚಿಸಲಾಗುವುದು.

v. ಕಾರ್ಡ್ ಮುಕ್ತಾಯಗೊಳಿಸುವ ಅಥವಾ ರದ್ದುಗೊಳಿಸುವ ಮೊದಲು ಪ್ರಾಥಮಿಕ ಕಾರ್ಡ್/ಆಡ್-ಆನ್ ಕಾರ್ಡ್ ನ್ನು ಬಳಸುವ ಮೂಲಕ ಉಂಟಾಗುವ ಎಲ್ಲಾ ಶುಲ್ಕಗಳಿಗೆ ಕಾರ್ಡುದಾರ ಬದ್ಧನಾಗಿರುತ್ತಾನೆ.

vi. ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯವರೆಗೆ ಕ್ರೆಡಿಟ್ ಕಾರ್ಡನ್ನು ಬಳಸದೇ ಇದ್ದಲ್ಲಿ, ಕಾರ್ಡುದಾರನಿಗೆ ಇದರ ಬಗ್ಗೆ ಮಾಹಿತಿ ನೀಡಿದ ನಂತರವೇ ಕಾರ್ಡನ್ನು ಸಮಾಪ್ತಿಗೊಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು. ಕಾರ್ಡುದರಿಂದ 30 ದಿನಗಳ ವರೆಗೆ ಯಾವುದೇ ಪ್ರತಿಕ್ರಿಯೆ ಸ್ವೀಕರಿಸದೇ ಇದ್ದರೆ ಕಾರ್ಡುದಾರರಿಂದ ಎಲ್ಲ ಬಾಕಿ ಮೊತ್ತದ ಪಾವತಿ ಒಳಪಟ್ಟು ಕಾರ್ಡ ಖಾತೆಯನ್ನು ಸಮಾಪ್ತಿ ಮಾಡಲಾಗುವುದು.

**ಎಫ್. ಹಾನಿ/ಕಳ್ಳತನ/ಕಾರ್ಡಿನ ದುರ್ಬಳಕೆ:**

i. ಒಂದು ವೇಳೆ ಕಾರ್ಡು ಕಳೆದು ಹೋದರೆ ಅಥವಾ ಕಳ್ಳತನವಾದರೆ ಕಾರ್ಡುದಾರರು ತಕ್ಷಣವೇ ಬ್ಯಾಂಕಿಗೆ ಫೋನ್ ಮೂಲಕ ಅಥವಾ ಈ-ಮೇಲ್/ಎಸ್ ಎಮ್ ಎಸ್/ಮೊಬೈಲ್ ಅಪ್ಲಿಕೇಶನ್ ಮೂಲಕ ತಿಳಿಸಬೇಕು.

| | |
|---|---|
| ದೂರವಾಣಿ | 24x7 ರಾಷ್ಟ್ರೀಯ ಟೋಲ್-ಫ್ರೀ ಸಂಖ್ಯೆ-18004251515 ಅಥವಾ ದೂರವಾಣಿ ಸಂಖ್ಯೆ 040-24683210 ಅಥವಾ 24683220 |
| ಈ-ಮೇಲ್ | ccdhelpdesk@unionbankofindia.bank |
| ಎಸ್ ಎಮ್ ಎಸ್ | ಈ ಕೆಳಗಿನಂತೆ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ 7836884400 CARDLOST<space>XXXX (XXXX denots ಕ್ರೆಡಿಟ್ ಕಾರ್ಡಿನ ಕೊನೆಯ 4 ಡಿಜಿಟ್ ಗಳು |

ii. ಕಾರ್ಡುದಾರ ಪೋಲೀಸರಿಗೆ ದೂರು/ಪ್ರಥಮ ಮಾಹಿತಿ ವರದಿಯ(FIR)ನ್ನು ಸಲ್ಲಿಸಬೇಕು ಮತ್ತು ಅದರ ಪ್ರತಿಯನ್ನು ಬ್ಯಾಂಕಿಗೆ ನೋಟಿಸ್ ನೊಂದಿಗೆ ನೀಡಬೇಕು.

iii. ಬ್ಯಾಂಕಿನಿಂದ ಸೂಚನೆಗಳನ್ನು ಸ್ವೀಕರಿಸುವವರೆಗೆ ಕಾರ್ಡುದಾರನು ಎಲ್ಲ ವ್ಯವಹಾರಗಳಿಗೆ ಕಾರ್ಡುಗಳ ಮೇಲಿನ ಶುಲ್ಕಗಳಿಗೆ ಜವಾಬ್ದಾರನಾಗಿರುತ್ತಾನೆ.

iv. ಕಾರ್ಡುದಾರ ತಾನು ಕಾರ್ಡ್ ಸ್ವೀಕರಿಸಿಲ್ಲ ಎಂದು ನಂಬಲು ಕಾರಣವನ್ನು ಹೊಂದಿದ್ದರೆ ಅಥವಾ ಅವನ/ಅವಳ ಕಾರ್ಡನ್ನು ಇತರರು ದುರಪಯೋಗಪಡಿಸಿಕೊಳ್ಳುತ್ತಿದ್ದರೆ, ಕಾರ್ಡುದಾರರು ತಕ್ಷಣವೇ ಬ್ಯಾಂಕಿಗೆ ಲಿಖಿತ ರೂಪದಲ್ಲಿ ತಿಳಿಸಬೇಕು.

v. ಕಾರ್ಡುದಾರನ ನಿರ್ಲಕ್ಷ್ಯದಿಂದ ನಷ್ಟವುಂಟಾದ ಸಂದರ್ಭಗಳಲ್ಲಿ ಕಾರ್ಡುದಾರನ ಸಂಪೂರ್ಣ ನಷ್ಟ ಭರಿಸತಕ್ಕದ್ದು, ಉದಾಹರಣೆಗೆ ಕಾರ್ಡುದಾರ ಪೇಮೆಂಟ್/ಖಾತೆಯ ವಹಿವಾಟಿನ ವಿವರಗಳನ್ನು ಇತರೊಂದಿಗೆ ಹಂಚಿಕೊಂಡಿದ್ದರೆ, ಅಂದರೆ, ಇಂಟರ್ನೆಟ್ ಬ್ಯಾಂಕಿಂಗ ಬಳಕೆದಾರರ ಐಡಿ ಮತ್ತು ಪಿನ್, ಕ್ರೆಡಿಟ್ ಕಾರ್ಡಿನ ಪಿನ್/ಒಟಿ ಪಿ ಅಥವಾ ಮೊಬೈಲ್/ಲ್ಯಾಪ್ ಟಾಪ್/ಡೆಸ್ಕ ಟಾಪ್ ನಂತಹ ಸಾಧನಗಳಲ್ಲಿ ಅಸಮರ್ಪಕ ರಕ್ಷಣೆಯಿಂದಾಗಿ ಮಾಲ್ ವೇರ್/ಟ್ರೋಜನ್ ಅಥವಾ ಫಿಶಿಂಗ್/ವಿಶಿಂಗ್ ದಾಳಿಗೆ ಕಾರಣವಾಗುತ್ತದೆ. ವಂಚಕನ ಸಿಮ್ ನಿಷ್ಕ್ರಿಯಗೊಳಿಸುವಿಕೆಯೂ ಇದಕ್ಕೆ ಕಾರಣವಾಗಿರಬಹುದು. ಅಂತಹ ಸಂದರ್ಭಗಳಲ್ಲಿ, ಕಾರ್ಡುದಾರರು ಅನಧಿಕೃತ ವಹಿವಾಟಿನ ಕುರಿತು ಬ್ಯಾಂಕಿಗೆ ವರದಿ ಮಾಡುವವರೆಗೆ ಸಂಪೂರ್ಣ ನಷ್ಟವನ್ನು ಕಾರ್ಡುದಾರರು ಭರಿಸುತ್ತಾರೆ.

vi. ಕಾರ್ಡುದಾರ ಯಾವುದೇ ವಿವಾದಿತ ವ್ಯವಹಾರಗಳ ಯಾವುದೇ ತನಿಖೆ ಸಂದರ್ಭದಲ್ಲಿ ಬ್ಯಾಂಕು/ಕಾನೂನು ಜಾರಿಗೊಳಿಸುವ ಅಧಿಕಾರಿಗಳೊಂದಿಗೆ ಸಂಪೂರ್ಣವಾಗಿ ಸಹಕರಿಸಬೇಕು.

**ಜಿ. ಕುಂದುಕೊರತೆಗಳ ಪರಿಹಾರ ಮತ್ತು ಪರಿಹಾರದ ವ್ಯಾಪ್ತಿ:**

यूनियन बैंक ऑफ इंडिया ★ UNION BANK OF INDIA ★ Credit Card & MAB Deptt.

### ಅತೀ ಮಹತ್ವಪೂರ್ಣ ನಿಯಮಗಳು ಹಾಗೂ ಷರತ್ತುಗಳು (ಎಂಆಯ್ ಟಿಸಿ)

ಕಾರ್ಡುದಾರರು ಈ ಕೆಳಗಿನ ಯಾವುದೇ ವಿಧಾನಗಳ ಮೂಲಕ ಯಾವುದೇ ವಿಚಾರಣೆಗಳನ್ನು ಮಾಡಲು ಅಥವಾ ಯಾವುದೇ ಕುಂದುಕೊರತೆಗಳ ಪರಿಹಾರಕ್ಕಾಗಿ ಬ್ಯಾಂಕ್ ನ್ನು ಸಂಪರ್ಕಿಸಬಹುದಾಗಿದೆ.

i. 24x7 ಟೋಲ್-ಫ್ರೀ ಸಂಖ್ಯೆ: 1800-425-1515
ii. 040-24683210/3219/3220 (ಗ್ರಾಹಕ ಸೇವಾ ಅಧಿಕಾರಿ -ಕಛೇರಿಯ ಸಮಯದಲ್ಲಿ)
iii. ಈ-ಮೇಲ್ ವಿಳಾಸ ಮೂಲಕ: ccdhelpdesk@unionbankofindia.bank
iv. ಕ್ರೆಡಿಟ್ ಕಾರ್ಡ್ ಮತ್ತು ಎಮ್ ಎ ಬಿ ವಿಭಾಗ,ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸುಲ್ತಾನ್ ಬಜಾರ್, ಕೋಟಿ, ಹೈದರಾಬಾದ್-500095, ತೆಲಂಗಾಣ, ಭಾರತ-ಕ್ಕೆ ದೂರವಾಣಿ ಕರೆ ಮಾಡುವುದರ ಮೂಲಕ.
v. ಕಾರ್ಡುದಾರರಿಂದ ನಿರ್ದಿಷ್ಟ ಸಮಯದೊಳಗೆ ಪ್ರತಿಕ್ರಿಯೆ ಸ್ವೀಕರಿಸದೇ ಇದ್ದರೆ, ಕ್ರೆಡಿಟ್ ಕಾರ್ಡ್ ಮತ್ತು ಎಮ್ ಎ ಬಿ ವಿಭಾಗ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸುಲ್ತಾನ್ ಬಜಾರ್. ಕೋಟಿ, ಹೈದರಾಬಾದ ನ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನು ದೂರವಾಣಿ ಸಂಖ್ಯೆ040-24683209 ಅಥವಾ ccd.grievances@unionbankofindia.bank ಈಮೇಲ್ ಕಳುಹಿಸುವುದರ ಮೂಲಕ ಸಂಪರ್ಕಿಸಬಹುದಾಗಿದೆ.

ಬ್ಯಾಂಕುಗಳ ಒದಗಿಸುವ ಸೇವೆಗಳಲ್ಲಿನ ಕೊರತೆಯಿಂದಾಗಿ ಗ್ರಾಹಕರು ಅನುಭವಿಸಬಹುದಾದ ಹಣಕಾಸಿನ ನಷ್ಟಗಳಿಗೆ ಪರಿಹಾರ, ಕುಂದುಕೊರತೆ ಪರಿಹಾರ ಮತ್ತು ಗ್ರಾಹಕರ ಹಕ್ಕುಗಳ ನೀತಿಯಿಂದ ಬ್ಯಾಂಕ್ ಮಾರ್ಗದರ್ಶಿಸಲ್ಪಡುತ್ತದೆ. ಪರಿಹಾರ ನೀತಿಯ ಪ್ರಕಾರ ಬದ್ಧತೆಗಳು ಯಾವುದೇ ಹಕ್ಕಿಗೆ ಪೂರ್ವಾಗ್ರಹವಿಲ್ಲದೇ, ಬ್ಯಾಂಕರ್-ಗ್ರಾಹಕರ ವಿವಾದಗಳನ್ನು ನಿರ್ಣಯಿಸಲು, ರಚಿಸಲಾದ ಯಾವುದೇ ವೇದಿಕೆಯ ಮುಂದೆ ಬ್ಯಾಂಕ್ ತನ್ನ ಸ್ಥಾನವನ್ನು ಸಮರ್ಥಿಸಕೊಳ್ಳುತ್ತದೆ.

**ಎಚ್. ಬಹಿರಂಗಪಡಿಸುವಿಕೆ:**

i. ಅರ್ಜಿದಾರನು ಈ ಕೆಳಗಿನಂತೆ ಬ್ಯಾಂಕ್ ನ್ನು ಸ್ಪಷ್ಟವಾಗಿ ಅಧಿಕೃತಗೊಳಿಸುತ್ತಾರೆ.

*"ಯಾವುದೇ ನಿರ್ದಿಷ್ಟ ಅಥವಾ ಯಾವುದೇ ಇತರೆ ಕಾರ್ಡ್ ವಿತರಕರು, ಸಿಬಿಲ್ ಅಥವಾ ಯಾವುದೇ ಕ್ರೆಡಿಟ್ ಮಾಹಿತಿ, ಬ್ಯೂರೋ, ಹಣಕಾಸು ಸಂಸ್ಥೆ, ಅಂಗ ಸಂಸ್ಥೆ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಅಂಗ ಸಂಸ್ಥೆ ಅಥವಾ ಸಹವರ್ತಿಗಳಿಗೆ ಪಾವತಿ ಸೇರಿದಂತೆ ನನ್ನ/ನಮ್ಮ ಕಾರ್ಡ್/ಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಕಾಲ-ಕಾಲಕ್ಕೆ ಬಹಿರಂಗ ಪಡಿಸಲು ಮತ್ತು ಮಾರ್ಕೆಟಿಂಗ್, ಪರಿಶೀಲನೆ, ಮರುಪಡೆಯುವಿಕೆ ಅಥವಾ ಕಾರ್ಡ್ ಬಾಕಿಗಳ ಅನುಸರಣೆಯಂತಹ ಉದ್ದೇಶಗಳಿಗಾಗಿ ಮತ್ತು ಹಣಕಾಸು ವ್ಯವಸ್ಥೆಯ ಕಾರ್ಯಶೀಲತೆ ಮತ್ತು ಸ್ಥಿರತೆಯನ್ನು ಸುಧಾರಿಸಲು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಿಂದ ತೊಡಗಿಸಿಕೊಂಡಿರುವ ಯಾವುದೇ ಮೂರನೇ ವ್ಯಕ್ತಿಗೆ"*

**ii. ಹೊಣೆಗಾರಿಕೆಯ ಹೊರಗಿಡುವಿಕೆ:**

ಮೇಲಿನವುಗಳಿಗೆ ಪೂರ್ವಾಗ್ರಹವಿಲ್ಲದೇ, ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ ಕಾರ್ಡುದಾರರಿಗೆ ಯಾವುದೇ ಹೊಣೆಗಾರಿಕೆಯನ್ನು ಬ್ಯಾಂಕ್ ಹೊಂದಿರುವುದಿಲ್ಲ-

a) ಕ್ರೆಡಿಟ್ ಕಾರ್ಡ್ ಮೂಲಕ ಖರೀದಿಸಿದ ಯಾವುದೇ ಸರಕು ಅಥವಾ ಸೇವೆಗಳಲ್ಲಿ ಯಾವುದೇ ದೋಷವಿರುವುದು.

b) ಕ್ರೆಡಿಟ್ ಕಾರ್ಡ್ ನ್ನು ಗೌರವಿಸಲು ಅಥವಾ ಸ್ವೀಕರಿಸಲು ಯಾವುದೇ ವ್ಯಕ್ತಿಯ ನಿರಾಕರಣೆ.

c) ಯಾವುದೇ ಎಲೆಕ್ಟ್ರಾನಿಕ್ ಡೇಟಾ ಟರ್ಮಿನಲ್/ಉಪಕರಣಗಳು/ಯಾವುದೇ ಕಂಪ್ಯೂಟರ್ ಅಥವಾ ಸಂವಹಣ ಜಾಲದ ಅಸಮರ್ಪಕ ಕಾರ್ಯ.

d) ಕಾರ್ಡುದಾರರ ಹೊರತಾಗಿ ವ್ಯವಹಾರದ ಸೂಚನೆಗಳನ್ನು ನೀಡುವುದು.

e) ಕಾರ್ಡನ್ನು ಹಿಂತಿರುಗಿಸಲು ವಿನಂತಿಸುವ ಯಾವುದೇ ವ್ಯಕ್ತಿಯಿಂದ ಮಾಡಿದ ಯಾವುದೇ ಹೇಳಿಕೆ ಅಥವಾ ಯಾವುದೇ ವ್ಯಕ್ತಿ ಸಹಯೋಗದೊಂದಿಗೆ ಮಾಡಿದ ಯಾವುದೇ ಕ್ರಿಯೆ.

f) ಕಾರ್ಡಿನ ಹಸ್ತಾಂತರ ಮತ್ತು ಕಾರ್ಡಿನ ಹಿಂದಿನ ಭಾಗದಲ್ಲಿ ನಮೂದಿಸಲಾದ ಕಾರ್ಡ್ ಸಂಖ್ಯೆ, ಮುಕ್ತಾಯದ ಅವಧಿ, ದಿನಾಂಕ, 3 ಅಂಕಿಗಳ ಸಿ ವಿ ವಿ ಸಂಖ್ಯೆ ಅಥವಾ ಕಾರ್ಡದಾರರಿಂದ ಇತರರಿಗೆ ಒಂದು ಬಾರಿ ಪಿನ್ (ಒಟಿಪಿ) ಅಡಿಯಲ್ಲಿ ರಚಿಸಲಾದ ಅಥವಾ ಪಾಸವರ್ಡ್ ನಂತಹ ವಿವರಗಳು.

**g)** ಬ್ಯಾಂಕ್ ಅಥವಾ ಇತರೇ ವ್ಯಕ್ತಿ ಅಥವಾ ಎಲೆಕ್ಟ್ರಾನಿಕ್ ಡೇಟಾ ಕಾಪ್ಚರ್ ಟರ್ಮಿನಲ್ (ಈ ಡಿ ಸಿ ಅಥವಾ ಪಿ ಎ ಎಸ್) ಅಥವಾ ಕಂಪ್ಯೂಟರ್ ಟರ್ಮಿನಲ್ ಅಥವಾ ಎ ಟಿ ಎಂ ಮೂಲಕ ತನ್ನ ಮುಖದ ಮೇಲೆ ನಮೂದಿಸಲಾದ ಮುಕ್ತಾಯ ದಿನಾಂಕ ಮೊದಲು ಕಾರ್ಡ್ ನ್ನು ಹಿಂತಿರುಗಿಸುವ ಬೇಡಿಕೆ ಇಡಲು ಮತ್ತು ಸಂಗ್ರಹಿಸಲು ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

**h)** ಯಾವುದೇ ಕಾರ್ಡ್ ನ್ನು ಅಂತ್ಯಗೊಳಿಸಲು ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

***i)*** *ಕಾರ್ಡ್ ನ್ನು ಮರು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಯಾವುದೇ ವ್ಯಾಪಾರಿ ಸಂಸ್ಥೆ/ಎಟಿಎಂ/ವೆಬ್ ಸೈಟ್ ಅಥವಾ ಮೇಲ್ ಆರ್ಡರ್ ಅಥವಾ ಯಾವುದೇ ಸಂಸ್ಥೆಯಿಂದ ಅದನ್ನು ಹಿಂದಿರುಗಿಸುವುದು ಅಥವಾ ನಿರಾಕರಣೆಯಿಂದ ಉಂಟಾಗಿದೆ ಎಂದು ಹೇಳಲಾದ ಕಾರ್ಡುದಾರನ ಕ್ರೆಡಿಟ್ ಪಾತ್ರ ಮತ್ತು ಖ್ಯಾತಿಗೆ ಯಾವುದೇ ನಷ್ಟ ಸಂಭವಿಸುವುದು.*

***j)*** ಕಾಲ-ಕಾಲಕ್ಕೆ ನೀಡಲದಾ ಫೇಮಾ ನಿಯಮಗಳು ಅಥವಾ ಆರ್ ಬಿ ಐ ಮಾರ್ಗಸೂಚಿಗಳಿಂದ ಸೂಚಿಸಲಾದ ವಿದೇಶಿ ವಿನಿಮಯ ಅರ್ಹತೆಯನ್ನು ಕಾರ್ಡುದಾರರು ಮೀರಿದ್ದಾರೆ ಅಥವಾ ಕಾರ್ಡುದಾರರ ಅವರ ಮಿತಿ ಅಥವಾ ಅರ್ಹತೆ ಇತ್ಯಾದಿಗಳನ್ನುಮೀರಿದ್ದಾರೆ ಎಂದು ಬ್ಯಾಂಕಿಗೆ ತಿಳಿದಿರುವ ಕಾರಣ ಶುಲ್ಕವನ್ನು ನಿರಾಕರಿಸುವುದು.

*k)* ಕಾರ್ಡುದಾರರಿಂದ ಯಾವುದೇ ಬಾಕಿ ಬೇಡಿಕೆಯ ಸಂದರ್ಭದಲ್ಲಿ ಅಥವಾ ಬ್ಯಾಂಕ್ ಅಥವಾ ಬ್ಯಾಂಕ್ ಪರವಾಗಿ ಕಾರ್ಯನಿರ್ವಹಿಸುವ ಯಾವುದೇ ವ್ಯಕ್ತಿಯಿಂದ ಮಾಡಲಾದ ಬಾಕಿ ಇತ್ಯರ್ಥಕ್ಕಾಗಿ ದಾವೆ ಮಾಡಿದ ಸಂದರ್ಭದಲ್ಲಿ, ಕಾರ್ಡುದಾರನು ಅಂತಹ ಬೇಡಿಕೆ ಅಥವಾ ಧಾವೆ ಎಂದು ಒಪ್ಪಿಕೊಳ್ಳಬೇಕು ಮತ್ತು ಮಾನ ಹಾನಿಕರ ಅಥವಾ ಯಾವುದೇ ರೀತಿಯಲ್ಲಿ ಕಾರ್ಡುದಾರನ ಪಾತ್ರಕ್ಕೆ ಹಾನಿಕರವಾಗಿರುವುದು ಅಥವಾ ಆತನಿಗೆ ಪೂರ್ವಾಗ್ರಹ ಪಡಿಸುವುದು.

*l)* ವೀಸಾ/ಎನ್ ಪಿ ಸಿ ಐ ಕಂಸಿಯಾಜ್ ಸೇವೆಗಳು ಅಥವಾ ಯಾವುದೇ ದೇಶದಲ್ಲಿ/ಎನ್ ಪಿ ಸಿ ಐ ಅಥವಾ ವ್ಯಾಪಾರಿಗಳು ಒದಗಿಸಿದ ಯಾವುದೇ ಇತರ ಸೇವೆಗಳು ಕಾಲ-ಕಾಲಕ್ಕೆ ಯಾವುದೇ ಯೋಜನೆಯಡಿಯಲ್ಲಿ ನೀಡಬಹುದಾದ ಅಥವಾ ನೀಡಬಹುದಾದ ಯಾವುದೇ ರಿಯಾಯಿತಿ ಅಥವಾ ನಗದು; ಯಾವುದೇ ನಷ್ಟ ಅಥವಾ ಯಾವುದೇ ವ್ಯಾಪಾರಿಗಳಿಗೆ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲ.

*m)* ತಪ್ಪಾದ ಕಾರ್ಡಿನ ವಿವರಗಳೊಂದಿಗೆ ಪರಿಶೀಲನೆಯಲ್ಲಿ ದೃಢೀಕರಣದ ವಿಫಲತೆಯಿಂದಾಗಿ ಕಂಪ್ಯೂಟರ ಸಿಸ್ಟಮ್ ಅಥವಾ ಸಂಚಾರ ನೆಟವರ್ಕ್ ದಿಂದ ಸಿಸ್ಟಮ್ ಅಥವಾ ಸಂವಹನ ನೆಟವರ್ಕ್ ನಿಂದ ಯಾವುದೇ ಆನ್ ಲೈನ್ ವ್ಯವಹಾರದ ದೃಢೀಕರಣದ ನಿರಾಕರಣೆ.

## **ಜೆ. ಹೊಣೆಗಾರಿಕೆ ಮತ್ತು ಸೆಟ್-ಆಪ್ ಮಾಡುವ ಅಧಿಕಾರ:**

UNION BANK OF INDIA

i. ಬ್ಯಾಂಕ್ ತನ್ನ ಹತ್ತಿರ ಕಾರ್ಡುದಾರನ ಮತ್ತು /ಅಥವಾ ಎಡ್-ಆನ್ ಕಾರ್ಡುದಾರನ ಯಾವುದೇ ಖಾತೆಯಲ್ಲಿಯ ಜಮಾ ಮೊತ್ತವನ್ನು, ಅದು ಬ್ಯಾಂಕಿನ ಹತ್ತಿರ ಇರಲಿ ಅಥವಾ ಬ್ಯಾಂಕಿನ ಆಧೀನದಲ್ಲಿ ಇರಲಿ, ಇದರಿಂದ ಸಂಬಂಧಿಸಿದ ಎಲ್ಲ ಮೊತ್ತವನ್ನು, ಸಾಲ/ಬಾಕಿ ಮೊತ್ತ ಬದ್ದತೆ ಅವಧಿಯ ಮೇಲೆ ಸೆಟ್ -ಆಪ್ ಹಕ್ಕನ್ನು ಕಾಯ್ದಿರಿಸಿದೆ.

ii. ಬ್ಯಾಂಕಿನ ಆಂತರಿಕ ನೀತಿ ಅಥವಾ ಶಾಸನಬದ್ದ ಅಥವಾ ಆರ್ ಬಿ ಐ ಮಾರ್ಗಸೂಚಿಗಳ ಪ್ರಕಾರ ಕಾಲ-ಕಾಲಕ್ಕೆ ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ಬದಲಾಯಿಸುವ/ಮಾರ್ಪಡಿಸುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿದೆ.

iii. ಕಾಲ-ಕಾಲಕ್ಕೆ ಅಂತಹ ಬದಲಾವಣೆಗಳನ್ನು ಮಾಸಿಕ ಬಿಲ್ ಮೂಲಕ ಅಥವಾ ಎಸ್ ಎಂ ಎಸ್ ಮೂಲಕ ಅಥವಾ ಈ-ಮೇಲ್ ಮೂಲಕ ತಿಳಿಸಲಾಗುತ್ತದೆ ಮತ್ತು ಅಂತಹ ಬದಲಾವಣೆಗಳು ಕಾರ್ಡುದಾರನಿಗೆ ಬದ್ದವಾಗಿರುತ್ತವೆ.

iv. ಕಾರ್ಪೊರೇಟ್ ಕಾರ್ಡ್ ನ ಸಂದರ್ಭದಲ್ಲಿ, ಬಾಕಿ ಉಳಿದಿರುವ ಮೊತ್ತಕ್ಕೆ ಕಂಪನಿಯು ಸಂಪೂರ್ಣ ಜವಾಬ್ದಾರವಾಗಿರುತ್ತದೆ. ಬ್ಯಾಂಕಿನ ಸ್ವಾಧೀನದಲ್ಲಿ ಅಥವಾ ಸ್ವಾಧೀನದಲ್ಲಿರುವ ಬ್ಯಾಂಕ್/ಭದ್ರತೆಗಳೊಂದಿಗೆ ಕಂಪನಿಯ ಖಾತೆಗಳಲ್ಲಿ ಇರುವ ಹೊಣೆಗಾರಿಕೆ/ಸೆಟ್-ಆಪ್ ಮಾಡುವ ಹಕ್ಕನ್ನು ಕಾಯ್ದಿರಿಸಿದೆ.

## ಕೆ. ವಿವಿಧ:

i. ಕಾರ್ಡನ್ನು ಜಾರಿಗೊಳಿಸಿದ 30 ದಿನಗಳೊಳಗಾಗಿ ಕಾರ್ಡುದಾರನು ಕಾರ್ಡನ್ನು ಸಕ್ರಿಯಗೊಳಿಸಬೇಕು. ಇಲ್ಲವಾದಲ್ಲೀ, ಆರ್ ಬಿ ಐ ಮಾರ್ಗಸೂಚಿಯಾನುಸಾರ, ಕಾರ್ಡನ್ನು ರದ್ದುಗೊಳಿಸಲಾಗುವುದು.

ii. ಕಾರ್ಡುದಾರ ಗ್ರೀನ್ ಪಿನ್ ಪಡೆಯಲು ನಮ್ಮ ವೆಬ್ ಸೈಟ್ https://unioncards.unionbankofindia.co.in/ ಗೆ ಬೇಟಿ ನೀಡಬೇಕು ಅಥವಾ ಯೂನಿಯನ್ ಕ್ರೆಡಿಟ್ ಕಾರ್ಡ್ ಆಪ್ ನ್ನು ಉಪಯೋಗಿಸಬಹುದು.

iii. ವ್ಯವಹಾರದ ಸೂಚನೆಗಳನ್ನು ಪಡೆಯಲು ಕಾರ್ಡುದಾರನು ತನ್ನ ಮೊಬೈಲ್ ಸಂಖ್ಯೆ ಹಾಗೂ ಈ-ಮೇಲ್ ವಿಳಾಸವನ್ನು ನೀಡಬೇಕು. ಈ-ಮೇಲ್ ಐಡಿ ಅಥವಾ ಮೊಬೈಲ್ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ, ಅದನ್ನು ತಕ್ಷಣ ಬ್ಯಾಂಕಿಗೆ ತಿಳಿಸಬೇಕು. ಇದಕ್ಕೆ ಯೂನಿಯನ್ ಬ್ಯಾಂಕ್ ಇಂಡಿಯಾದ ಯಾವುದೇ ಶಾಖೆಯನ್ನು ಸಂಪರ್ಕಿಸಬಹುದು.

iv. ತನ್ನ ಸಮಗ್ರ ಕ್ರೆಡಿಟ್ ಕಾರ್ಡ್ ಮಿತಿಯ ಒಳಗೆ ಈ-ಕಾಮ್, ಪಿ ಒ ಎಸ್, ಎ.ಟಿ ಎಮ್. ನಲ್ಲಿ ದೇಶೀ ಹಾಗೂ ವಿದೇಶಿ ವ್ಯವಹಾರಗಳಿಗೆ ಉಪಯೋಗಿಸಬಹುದಾದ ಉಪ-ಮಿತಿಗಳನ್ನು ಕಾರ್ಡುದಾರನು ಯೂನಿಯನ್ ಕ್ರೆಡಿಟ್ ಕಾರ್ಡ್ ಆಪ್ ಅಥವಾ ವ್ಹೋಮ್ ನ ಮೂಲಕ ನಿರ್ಧರಿಸಬೇಕು.

v. ಮೋಸದ ವ್ಯವಹಾರದಿಂದ ಅಥವಾ ಕಾರ್ಡಿನ ದುರುಪಯೋಗದಿಂದ ಆಗಿರಬಹುದಾದ ಯಾವುದೇ ವ್ಯವಹಾರದ ಸೂಚನೆ ದೊರೆತ ಕೂಡಲೇ ಕಾರ್ಡುದಾರನು ಬ್ಯಾಂಕಿಗೆ ತಕ್ಷಣ ತಿಳಿಸಬೇಕು (24X7 ಟೋಲ್ ಫ್ರೀ ಸಂ.18004251515).

vi. ಸ್ಕಿಮಿಂಗ್ ಮೂಲಕ ಮೋಸ ಆಗದಂತೆ ದೃಢಪಡಿಸಿಕೊಳ್ಳಲು, ಕಾರ್ಡದಾರನು ತನ್ನ ಕಾರ್ಡನ್ನು ಪ್ರತಿಷ್ಠಿತ ಮಳಿಗೆಗಳಲ್ಲಿ ಮಾತ್ರ ಉಪಯೋಗಿಸಬೇಕು. ಕಾರ್ಡಿನ ಡೇಟಾದ ದುರುಪಯೋಗ ಅಥವಾ ಹ್ಯಾಕಿಂಗ್ ನ್ನು ತಡೆಯಲು ಯಾವುದೇ ಆನ್-ಲೈನ್ ವ್ಯವಹಾರಗಳನ್ನು ಸುರಕ್ಷಿತ ವೆಬ್ ಸೈಟ್ ಗಳಲ್ಲಿ ಮಾತ್ರ (https:// ಹೊಂದಿರುವ ವೆಬ್ ಸೈಟ್ ಗಳು) ಉಪಯೋಗಿಸಬೇಕು.

vii. ಕಾರ್ಡುದಾರನು ಯಾವುದೇ ಆನ್-ಲೈನ್ ವ್ಯವಹಾರವನ್ನು ಮಾಡುವಾಗ, ವ್ಯವಹಾರಕ್ಕೆ 2 ಫ್ಯಾಕ್ಟರ್ ಧೃಢೀಕರಣ (2ಎಫ್ ಎ) ಇದೆಯೇ ಎದು ಧೃಢಪಡಿಸಿಕೊಳ್ಳಬೇಕು.ಹೆಚ್ಚುವರಿ

ಪಾಸವರ್ಡ್ ಧೃಢೀಕರಣಕ್ಕೆ ವೆಬ್ ಸೈಟ್ ಕೇಳದಿದ್ದಲ್ಲಿ, ಆಗಬಹುದಾದ ಎಲ್ಲ ಕಾರ್ಯ ಹಾಗೂ ಪಾವತಿಗಳಿಗೆ ಕಾರ್ಡುದಾರನೇ ಹೊಣೆಗಾರನಾಗಿರುತ್ತಾನೆ. ನಂತರ ಬರುವ ಯಾವುದೇ ವಿವಾಗಳಿಗೆ ಬ್ಯಾಂಕ್ ಜವಾಬ್ದಾರಿಯಲ್ಲ.

viii. ಕಾರ್ಡಿನ ವಿವರಗಳು, ಮುಗಿಯುವ ಅವಧಿ, ಸಿ ವಿ ವಿ ಸಂಖ್ಯೆ,2 ಫೆಕ್ಟರ್ ಧೃಢೀಕರಣ ಅಥವಾ ಒ ಟಿ ಪಿ ಯನ್ನು ಕೇಳಬಹುದಾದ ಯಾವುದೇ ಫಿಶಿಂಗ್ ಈ-ಮೇಲ್ ನಿಂದ ಕಾರ್ಡುದಾರನು ಜಾಗೃತನಾಗಿರಬೇಕು.

ix. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹೊರತು ಪಡಿಸಿ, ಬ್ಯಾಂಕು ಕಾರ್ಡುದಾರನಿಗೆ ಸೂಕ್ತ ಸೂಚನೆಯನ್ನು ನೀಡಿ ಕಾಲ-ಕಾಲಕ್ಕೆ ಯಾವುದೇ ಶುಲ್ಕಗಳಲ್ಲಿ ಬದಲಾವಣೆ ಅಥವಾ ಹೊಸ ಶುಲ್ಕಗಳನ್ನು ವಿಧಿಸುವ ಅಥವಾ ತನಗೆ ಸೂಕ್ತವೆಂದು ತೋರುವ ಶುಲ್ಕಗಳನ್ನು ವಿಧಿಸಬಹುದಾಗಿದೆ.

UNION BANK OF INDIA
Credit Card & MAB Dept Hyd.